44(2)
55

Reg.

"if not delive.

"KODAGU" OF

ಕೊಡಗು.

ಸರ್ವೇಷಾ ಭೂತದಯಯೈವಾ ವಿದ್ಯಾ ನೀತಿ ರ್ಬಯಶ್ಯತಾ | ಭಕ್ಷಮುಕ್ತೇನ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಮೂಚಿಮಂಡ ಯಂ. ಗಣಪತಿ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಜನವರಿ ತಾರೀಕು ೨೭ನೇ ಶುಕ್ರವಾರ. | ಸಂಚಿಕೆ ೩೯

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws cut-ruby ear-rings. etc , etc., etc., in all prices Very attractive Prices most moderate.

Estimates free on enquiry.

Telegrams: 'PRECIOUS.'

V. Subramaniyer
Jeweller,

Designs free on enquiry.

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

52–9

GOVERNMENT SOAP FACTORY,
Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ
ಯಾವ ಗುಣಗಳು ಅವಶ್ಯಕವೆಂದು ನೀವು
ತಿಳಿದಿರುತ್ತೀರೋ ಆ ಗುಣಗಳೆಲ್ಲಾ
ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52–20

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ವಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00,000	28.2

ಜೋನಸ್ಸು.

ಕುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಜೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮುಚಂದ್ರರಾವ್,
ಸುಪರಿಂಟಿಂಡೆಂಟ್,
ಮಿಂಟೋ ಆಸ್ಪತ್ರೆ ಜಿಳಿ,
ಬೆಂಗಳೂರು.

52—39

ಕೊಡಗು.

ಸನ್ ೧೯೩೫ನೇ ಇಸವಿ

ಜನವರಿ ತಾ. ೨೬ನೇ ಶುಕ್ರವಾರ.

ಕೌನ್ಸಿಲ್ ಚುನಾವಣೆ.

ಹಿಂದೂಸ್ಥಾನಕ್ಕೆ ಕೊಡಬಹುದಾದ ಸುಧಾರಣೆಗಳ ಕುರಿತು ಪಾರ್ಲಿಮೆಂಟ್ ಕಮಿಟಿಯು ಏಪ್ರಿಲ್ ತಿಂಗಳಿನ ನಂತರ ಯೋಚಿಸಿದ ಮೇಲೆ ಪಾರ್ಲಿಮೆಂಟಿನ ಚರ್ಚೆ ನಡೆದು ಇದೇ ಇಸವಿ ನವಂಬರ್ ತಿಂಗಳೊಳಗೆ ಮಂಜೂರಾಗಬಹುದೆಂತಲೂ ಆದ್ದರಿಂದ ದೊಡ್ಡ ಪ್ರಾಂತ್ಯಗಳಲ್ಲಿ ಈ ವರ್ಷ ಆಗಬೇಕಾದ ಕೌನ್ಸಿಲ್ ಚುನಾವಣೆಯನ್ನು ಈ ವರ್ಷ ಮೂಡದೆ ಈಗಿನ ಕೌನ್ಸಿಲ್ ಮೆಂಬರುಗಳೇ ಇನ್ನೂ ಸ್ವಲ್ಪ ಕಾಲ ಮೆಂಬರುಗಳಾಗಿರುವಂತೆ ಸರಕಾರಿ ಹುಕ್ಕುಂ ಆಗಬಹುದೆಂತ ದಿಲ್ಲಿಯಿಂದ ವರ್ತಮಾನ ಬಂದಿದೆ. ಈ ಕಾರಣವನ್ನೇ ನೆಪವಾಗಿ ಮಾಡಿಕೊಂಡು ನಮ್ಮ ದೇಶದ ಕೌನ್ಸಿಲ್ ಚುನಾವಣೆಯನ್ನೂ ಮುಂದರಿಸಿಯಾರೋ ಎಂಬ ಭೀತಿ ಇದೆ. ಕಳೆದ ವಾರ ಒಬ್ಬ ಬಾತ್ಮಿದಾರರು ಬರಕೊಂಡಂತೆ ಫೆಬ್ರುವರಿ ಮಾರ್ಚಿ ತಿಂಗಳುಗಳಲ್ಲಿ ಆಗಬೇಕಾಗಿದ್ದ ಚುನಾವಣೆಯನ್ನು ಮೂಡದೆ ಮುಂದಕ್ಕೆ ಇಟ್ಟಿದ್ದೇ ತಪ್ಪಾಗಿದೆ. ಈ ವಿಷಯವನ್ನು ಸ್ಥಳೀಯ ಅಧಿಕಾರಿಗಳು ಯೋಚನೆಗೆ ತೆಗೆದುಕೊಳ್ಳದೆ ಇರುವುದು ಶೋಚನೀಯವಾಗಿದೆ. ಈಗ ಆಗಬೇಕಾದ ಚುನಾವಣೆಯು ಯಾಕೆ ಆಗಲಿಲ್ಲವೆಂತ ಕೇಳಿದರೆ ಓಟರು ಪಟ್ಟಿದುರಸ್ತಾಗುತ್ತಲಿದೆಯೆಂತ ಹೇಳುತ್ತಾರಂತೆ! ಈಗ ಚುನಾವಣೆಯಾಗಬೇಕಂತ ಮೂರು ವರ್ಷಗಳಿಂದಲೇ ಗೊತ್ತಿತ್ತಷ್ಟೆ. ಓಟರುಗಳ ಪಟ್ಟಿಗಳ ದುರವಸ್ಥೆಯನ್ನು ಈ ಮೊದಲೇ ಮಾಡಿಕೊಳ್ಳಬೇಕಾದದ್ದು ಅತ್ಯವಶ್ಯವಾಗಿತ್ತು.

ದೊಡ್ಡ ಪ್ರಾಂತ್ಯಗಳಿಗೆ ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರವು ಮಂಜೂರಾಗುತ್ತದೆಯೆಂತ ಬಹಿರಂಗವಾಗಿ ತಿಳಿದು ಸಂಗತಿಯಾಗಿದೆ. "ಫುಲ್ ಪ್ರೊವಿನ್ಶಿಯಲ್ ಅಟಾನಮಿ" ಎಂದರೆ ಸಂಪೂರ್ಣ ಪ್ರಾಂತೀಕ ಸ್ವಾತಂತ್ರ್ಯವು ದೊಡ್ಡ ಪ್ರಾಂತ್ಯಗಳಿಗೆ ಕೊಡಲಾಗುತ್ತದೆ. ಅಂಥಾ ಸ್ವಾತಂತ್ರ್ಯವನ್ನು ಉಪಯೋಗಿಸುವುದರಲ್ಲಿ ಕೆಲವು ಭದ್ರತೆಗಳನ್ನು ಇಟ್ಟುಕೊಳ್ಳುತ್ತಾರೆಂಬದು ನಿಜ. ಆದರೂ ಪ್ರಾಂತ್ಯದ ಆಡಳಿತದ ಎಲ್ಲಾ ಅಧಿಕಾರಗಳೂ ಪ್ರಜಾಜನರಿಂದ ಚುನಾಯಿತರ ಕೈಗೆ ಬರುತ್ತವೆ. ಈ ತರದ ಹೊಸ ಅಧಿಕಾರ ಸಿಕ್ಕುವ ಕೌನ್ಸಿಲುಗಳು ಈ ವರ್ಷದ ಅಖೈರ್ ಒಳಗೆ ದೊಡ್ಡ ಪ್ರಾಂತ್ಯಗಳಿಗೆ ದೊರೆಯುತ್ತದಾದ್ದರಿಂದ ಹಳೇ ಖಾನೂನು ಮೇರೆ ಈ ವರ್ಷ ಒಂದು ಚುನಾವಣೆ ನಡೆಸಿ ಹೊಸ ಖಾನೂನ್ ಮೇರೆ ಪುನಃ 1934 ರಲ್ಲಿ ಒಂದು ಚುನಾವಣೆ ನಡೆಸುವುದೆಂದರೆ ಅನಾವಶ್ಯಕ ಖರ್ಚು ಮತ್ತು ತೊಂದರೆಯೂಗುತ್ತದೆಯೆಂಬದು ನಿಜ. ಆದರೆ ಈಗ ಪಾರ್ಲಿಮೆಂಟಿನಿಂದ ಮಂಜೂರಾಗುವ ಸುಧಾರಣೆಯಲ್ಲಿ ನಮ್ಮ ದೇಶಕ್ಕೆ ಹೊಸ ರಾಜಕೀಯ ಹಕ್ಕುಗಳು ಸಿಕ್ಕುವ ಸಂಭವ ಕಡಿಮೆ ಇದೆ. ಯಾಕೆಂದರೆ ಚೀಫ್ ಕಮಿಶನರು ಈಗ ಎರಡು ವರ್ಷಗಳಿಂದ ಈ ವರೆಗೂ ಈ ದೇಶವು ದುಡುಕ ಬಾರದು, ದೊಡ್ಡ ಪ್ರಾಂತ್ಯಗಳಿಗೆ ಏನೇನು ಸಿಕ್ಕುತ್ತದೆಯೆಂತ ನೋಡಿ ಅನಂತರ ಯೋಚಿಸಬಹುದು ಎಂತ ಹೇಳುತ್ತಲಿದ್ದಾರೆಂತ ತಿಳಿದು ಬಂದಿದೆ. ಆದ್ದರಿಂದ ಸ್ಥಳೀಯ ಸರಕಾರದ ಅಭಿಪ್ರಾಯವೇ ನಡೆಯುವುದಾದರೆ ಈಗ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬರುವ ರಾಜಕೀಯ ಸುಧಾರಣೆಯ ಮಸೂದೆ ಖಾನೂನಿನಲ್ಲಿ ಕೊಡಗಿಗೆ ರಾಜಕೀಯ ಮೂರ್ತಾಡೇನೂ ಸಿಕ್ಕುವಂತಿಲ್ಲ. ಆದರೆ ಕೊಡಗಿನ ಸರ್ವಪಕ್ಷ ಪರಿಷತ್ತು ದೊಡ್ಡ ಪ್ರಾಂತ್ಯಗಳಿಗೆ ಕೊಡುವ ಸುಧಾರಣೆಯನ್ನೇ ಕೊಡಗಿಗೆ ಕೊಟ್ಟು ಅದನ್ನು ನಡಿಸಲು ಸಾಧ್ಯವಾಗುವಂತೆ ಮಧ್ಯವರ್ತಿ ಸರಕಾರದಿಂದ ಹಣ ಸಹ ಕೊಡಬೇಕು, ಇದು ಸಾಧ್ಯವಿಲ್ಲದಿದ್ದರೆ ಕೊಡಗಿನವರ ಹಕ್ಕುಗಳನ್ನು ಉಳಿಸಿಕೊಂಡು ಪ್ರತ್ಯೇಕ ಜಿಲ್ಲೆಯಾಗಿ ಮೈಸೂರಿಗೆ ಸೇರಿಸಬೇಕು." ಎಂತ ಕೇಳಿಕೊಂಡಿದೆ. ಇದರಲ್ಲಿ ಯಾವುದಾದರೂ ಒಂದು ಭಾಗವನ್ನು ಈಗ ಪಾರ್ಲಿಮೆಂಟ್ ಮುಂದೆ ಬರುವ ರಾಜಕೀಯ ಮೂರ್ತಾಡಿನ ಮಸೂದೆಯಲ್ಲಿ ಸೇರಿಸಿದರೆ ಕೌನ್ಸಿಲ್ ಚುನಾವಣೆಯನ್ನು ಮುಂದರಿಸಿ ಇಡಬಹುದು. ಸರ್ವಪಕ್ಷ ಪರಿಷತ್ತಿನ ಕೋರಿಕೆಯ ಯಾವ ಭಾಗವಾದರೂ ರಾಜಕೀಯ ಸುಧಾರಣೆಯ ಮಸೂದೆ ಖಾನೂನಿನಲ್ಲಿ ಅಂಗವುದಿಲ್ಲವಾದರೆ ನಮ್ಮ ದೇಶದ ಕೌನ್ಸಿಲ್ ಚುನಾವಣೆಯು ಮುಂದರಿಸಲ್ಪಡಲೇ ಬಾರದು.

ದೇಶದ ಬಹು ಜನರ ಕೋರಿಕೆಯೂದ ಸರ್ವ ಪಕ್ಷ ಪರಿಷತ್ತಿನ ತೀರ್ಮಾನವನ್ನು ಸರಕಾರವು ಜಾರಿಗೆ ತರಬೇಕಂತ ನಮ್ಮ ಆಶೆಯು ತುಂಬಾ ಇದೆಯೊದರೂ, ನಮ್ಮ ಯಾಚ್ಞೆ ಪೂರ್ತಿಯಾಗುವ ಸಂಭವ ಬಹಳ ಕಡಿಮೆ ಇದೆ. 2ನೇ ದುಂಡು ಮೇಜು ಪರಿಷತ್ತಿನ ತೀರ್ಮಾನದ ಮೇರೆ ನೇಮಿತವಾದ ಕನ್ಸಲ್ಟೇಟಿವ್ ಕಮಿಟಿಯವರು ಕೊಡಗಿನಂಥ ಚಿಕ್ಕ ಪ್ರಾಂತ್ಯಗಳಿಗೆ ಯಾವ ತರದ ಪೂರ್ತಾಡು ಕೊಡಬೇಕೆಂಬದನ್ನು ಯೋಚಿಸುವ ಉದ್ದೇಶದಿಂದ ಇಂಥಾ ಚಿಕ್ಕ ಪ್ರಾಂತ್ಯಗಳ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಿದ್ದರು ಆದರೆ ಆ ಕನ್ಸಲ್ಟೇಟಿವ್ ಕಮಿಟಿಯ. ಏನೂ ಗದ್ದಲವಿಲ್ಲದೆ ನಡಿಸಿ ಹೋಯಿತು. 3ನೇ ದುಂಡು ಮೇಜು ಪರಿಷತ್ತು ನಡೆಯಿತು. ಮೂರನೇ ದುಂಡು ಮೇಜು ಪರಿಷತ್ತಿನಲ್ಲು ಚಿಕ್ಕ ಚಿಕ್ಕ ಪ್ರಾಂತ್ಯಗಳ ಸುಧಾರಣೆಯು ಕಾರ್ಯ ಕ್ರಮ ಪಟ್ಟಿಯಲ್ಲಿ ಸೇರಿತ್ತು. ಆದರೆ ದೊಡ್ಡ ಪ್ರಾಂತ್ಯಗಳ ಮತ್ತು ಮಧ್ಯವರ್ತಿ ಸರ್ಕಾರದ ಭವಿಷ್ಯತ್ತನ್ನು ಚರ್ಚಿಸುತ್ತಾ ಈ ಪರಿಷತ್ತೂ ಮುಕ್ತಾಯವಾಯಿತು. ಚಿಕ್ಕ ಪ್ರಾಂತ್ಯಗಳ ಚಿಕ್ಕ ವಿಷಯಕ್ಕೆ ತಲಸಲೇ ಇಲ್ಲ. ಈ ಪರಿಷತ್ತು ಮುಕ್ತಾಯವಾಗುವುದರೊಳಗೆ ಕೊಡಗಿನ ಕೋರಿಕೆಯು ಹೋಗಿತ್ತಾದರೂ ಸ್ಥಳೀಯ ಸರ್ಕಾರ ಮತ್ತು ಇಂಡಿಯಾ ಸರ್ಕಾರದ ಅಭಿಪ್ರಾಯವಿಲ್ಲದೆ ಜನರ ಅಭಿಪ್ರಾಯಕ್ಕೆ ಬೆಲೆ ಕೊಡುವ ಪದ್ಧತಿಯಿಲ್ಲ. ಆದ್ದರಿಂದ ಪಾರ್ಲಿಮೆಂಟಿನ ಮುಂದೆ ಬರುವ ಸುಧಾರಣೆಯ ಮಸೂದೆಯಲ್ಲು ಕೊಡಗಿನ ವಿಚಾರವಿರುವ ಸಂಭವವೇ ಇಲ್ಲ. ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯ ಮುಂದೆ ಕೊಡಗಿನ ಒಗ್ಗಟ್ಟಿನ ತೀರ್ಮಾನವನ್ನು ಇಟ್ಟರೆ ಪಾರ್ಲಿಮೆಂಟ್ ಮುಂದೆ ಕೊಡಗಿನ ರಾಜಕೀಯ ಭವಿಷ್ಯತ್ತು ಚರ್ಚೆಗೆ ಬರುವ ಸಂಭವವಿದೆ.

ಇದಕ್ಕೆ ಸಹ ಸರ್ಕಾರವು ಸುಲಭವಾಗಿ ಒಂದು ಜವಾಬು ಕೊಡಲು ಅವಕಾಶವಿದೆ. ಕೊಡಗು ಕೌನ್ಸಿಲು ರಾಜಕೀಯ ಭವಿಷ್ಯತ್ತಿನ ವಿಷಯದಲ್ಲಿ ಯಾವ ಅಭಿಪ್ರಾಯ ಕೊಡುತ್ತದೆಯೆಂತ ತಿಳಿಯಲಿಕ್ಕಾಗಿಯೇ ನಡೆಸಿದ ಸೆಪ್ಟೆಂಬರ್ ಕೌನ್ಸಿಲ್ ಎಲೆಂಟಿಂಗಿನಲ್ಲಿ ಉಪ್ಪು ಹುಳಿ ಏನೂ ಇಲ್ಲದ ಒಂದು ತರಾವು ಚರ್ಚೆಯಾಗಿ ಬರೀ ಏಳು ಜನರ ಓಟನ್ನು ಪಡೆದು ಮಂಜೂರಾಗಿದೆ. ಆ ತರಾವಿಗೆ ವಿರೋಧವಾಗಿ ಸರ್ವ ಪಕ್ಷ ಪರಿಷತ್ತಿನ ಅಭಿಪ್ರಾಯವು ದೇಶದ ಅಭಿಪ್ರಾಯವೆಂತ ಹೇಗೆ ಹೇಳುವುದು ಎಂತ ಸರ್ಕಾರವು ಕೇಳಬಹುದು. ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಕೌನ್ಸಿಲ್ ಎಲೆಂಟಿಂಗಿನ ತೀರ್ಮಾನವು ದೇಶದ ಅಭಿಪ್ರಾಯವೆಂತ ಹೇಳಲಿಕ್ಕಾಗುವುದಿಲ್ಲವಾಗಿ ಚೀಫ್ ಕಮಿಶನರು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದಾರಂತೆ ರಾಜಕೀಯ ಭವಿಷ್ಯತ್ತನ್ನು ಕುರಿತು ಅಭಿಪ್ರಾಯ ಕೊಡಲಿಕ್ಕಾಗಿಯೇ ಚುನಾವಣೆ ನಡೆಸಿ ಅಂಥಾ ಚುನಾವಣೆಯಲ್ಲಿ ಬಂದ ಮೆಂಬರುಗಳಲ್ಲವಾದ್ದರಿಂದ ಚೀಫ್ ಕಮಿಷನರು ಹೀಗೆ ಹೇಳಲು ಶಕ್ಯವಾಯಿತು. ಆದ್ದರಿಂದಲೇ ಕೊಡಗಿನ ಜನರ ಅಭಿಪ್ರಾಯವು ಸರ್ಕಾರದಿಂದ ಅಂಗೀಕೃತವಾಗುವಂತೆ ಹೇಳಬೇಕಾದರೆ ರಾಜಕೀಯ ಮೂರ್ತಾಡು ಎಂಥಾದ್ದಿರಬೇಕೆಂಬದನ್ನೇ ನಿರ್ಣಯಿಸಲು ಕೂಡಲೇ ಒಂದು ಚುನಾವಣೆಯಾಗಬೇಕಾದದ್ದಾಗಿದೆ.

ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ ಮುಂದೆ ರಾಜಕೀಯ ಸುಧಾರಣೆಯು ಚರ್ಚೆಗೆ ಬರುವ ಮುಂಚೆ ಇಲ್ಲವಾದರೂ ಪಾರ್ಲಿಮೆಂಟಿನಲ್ಲಿ ಅಕ್ಟೋಬರ್, ನವಂಬರ್ ತಿಂಗಳುಗಳಲ್ಲಿ ಆಗುವ ಚರ್ಚೆಗೆ ಮುಂಚೆಯೊದರೂ ಹೊಸತಾಗಿ ಚುನಾವಣೆಯಾಗುವ ಕೌನ್ಸಿಲಿನ ಅಭಿಪ್ರಾಯವನ್ನು ತೆಗೆದುಕೊಳ್ಳಲು ಅನುಕೂಲ ಮಾಡಿ ಕೊಡಬೇಕು. ಇದು ಸಾಧ್ಯವಾಗಬೇಕಾದರೆ ಕೂಡಲೇ ಕೌನ್ಸಿಲ್ ಚುನಾವಣೆ ನಡೆಸಿ ಸೆಪ್ಟೆಂಬರ್ ತಿಂಗಳಲ್ಲಿ ಈ ವಿಷಯವನ್ನು ಚರ್ಚೆಗೆ ತಂದು ತೀರ್ಮಾನಿಸಬೇಕು. ಆದ್ದರಿಂದ ನಮ್ಮ ದೇಶದ ಕೌನ್ಸಿಲ್ ಚುನಾವಣೆ ಮುಂದರಿಸಿ ಇಡಬೇಕಾದದ್ದರ ಒದಲು ಕೂಡಲೇ ನಡಿಸಲ್ಪಡಬೇಕಾಗಿದೆ.

ಹರಿಜನರಿಗೆ ದೇವಸ್ಥಾನಗಳ ಪ್ರವೇಶದ ಕುರಿತು ಖಾನೂನಿನ ಮಸೂದೆ.

ಮದ್ರಾಸ್ ಅಧಿಪತ್ಯದ ದೇವಸ್ಥಾನಗಳಲ್ಲಿ ಹರಿಜನರಿಗೆ ದೇವಸ್ಥಾನಗಳು ಪ್ರವೇಶಿಸುವುದು ಖಾನೂನಿಗೆ ವಿರೋಧವೆಂತ ಇರುವುದನ್ನು ಹೋಗಲಾಡಿಸಲು ಮದ್ರಾಸ್ ನ್ಯಾಯವಿಧಾಯಕ ಸಭೆಯ ಚರ್ಚೆಗೆ ಒಂದು ಬಿಲ್ಲನ್ನು ತರುವ ಬಗ್ಗೆ ಡಾ. ಸುಬ್ಬರಾಯನ್‌ರು ಖಾನೂನು ಮೇರೆ ವೈಸ್‌ರಾಯರ ಅನುಮತಿಯನ್ನು ಕೇಳಿದ್ದರು. ಇದೇ ಸಂಬಂಧದ ಒಂದು ಬಿಲ್ಲನ್ನು ಎಸೆಂಬ್ಲಿಯಲ್ಲಿ ತರಲು ಎಸೆಂಬ್ಲಿ ಮೆಂಬರಾದ ಸಿ. ಯಸ್. ರಂಗೈಯ್ಯರು ಅನುಮತಿ ಕೇಳಿದ್ದರು. ಈ ವಾರದಲ್ಲಿ ವೈಸ್‌ರಾಯರು ಮದ್ರಾಸ್ ಬಿಲ್ಲಿಗೆ ಮಂಜೂರಾತಿ ಕೊಡದೆ ಎಸೆಂಬ್ಲಿ ಬಿಲ್ಲಿಗೆ ಮಂಜೂರಾತಿ ಕೊಟ್ಟಿದ್ದಾರೆ. ಈ ಕುರಿತು ಮಹಾತ್ಮ ಗಾಂಧಿಯವರು ಹೇಳಿರುವುದೇನೆಂದರೆ:—

ಎರಡು ಬಿಲ್‌ಗಳಿಗೂ ಮಂಜೂರಾತಿ ಕೊಡದಿರುವುದು ವ್ಯಸನಕರವಾಗಿದೆ. ಮದ್ರಾಸಿನ ಬಿಲ್ ಬರೇ ದೇವಸ್ಥಾನಗಳ ಪ್ರವೇಶದ ಕುರಿತಾಗಿತ್ತು ಮತ್ತು ದೇವಸ್ಥಾನಗಳಿಗೆ ಹೋಗುವವರಲ್ಲಿ ಒಹು ಜನರ ಅಭಿಪ್ರಾಯವನ್ನು ಅನುಸರಿಸಿ ಪ್ರವೇಶಕ್ಕೆ ಬಿಡಬೇಕೆಂತ ಇತ್ತು. ಇದರಿಂದ ಜನರೊಳಗೆ ಹೋರಾಟವು ಬಹಳ ಕಡಮೆಯಾಗುತ್ತಿತ್ತು. ಮತ್ತು ನನ್ನ ರಾಜಿ ಸಲಹೆಯು ಅಂಗೀಕೃತವಾಗಿದ್ದರೆ ಹೋರಾಟವೇ ಇರುತ್ತಿರಲಿಲ್ಲ. ಆದರೆ ಇದು ಮಂಜೂರಾಗಲಿಲ್ಲ. ಮದ್ರಾಸ್ ಬಿಲ್ಲೇ ಸನಾತನಿಗಳ ದೃಷ್ಟಿಯಿಂದ ಉತ್ತಮವಾಗಿತ್ತು. ಸುಧಾರಕರಿಗೂ ಅನುಕೂಲವಾಗಿತ್ತು. ಉಪವಾಸವಾದರೂ ಈಡಾಗಿ ನಿಂತಿರುವ ನನಗೂ ಸಂತೃಪ್ತಿ, ಆದರೆ ಇಂಡಿಯಾ ಸರಕಾರವು ಇದಕ್ಕೆ ಒಪ್ಪಲಿಲ್ಲ.
ಯೋ ಎಂತ ನೋಡಬೇಕಾಗಿ
ಪೂರ್ಣವಾಗಿ ಅಜವೂಯಿಸಬೇಕೆಂ.
ಡಬೇಕೆಂತ ಇದ್ದಾನಾದರೆ ಅವನನ್ನು ಸು
ಗೆ ಶಕ್ತಿ ಕೊಡುವಂತೆ ನನಗೂ ಶಕ್ತಿಕೊಡಬೇಕು.

ಅಖಿಲ ಭಾರತಕ್ಕೆ ವ್ಯಾಪಿಸುವ ಬಿಲ್ ಸೂಕ್ಷ್ಮ ಸುಧಾರಕರಿಗೆ ಸೀದಾ ಸಹಾಯವೇನೂ ಕೊಡುವುದಿಲ್ಲ. ದೂ ಧರ್ಮಕ್ಕೂ ನ್ಯಾಯಕ್ಕೂ ವಿರೋಧವಾದ ಪದ್ಧನ್ನು ಹಿಂದೂ ಸಮಾಜದ ಮೇಲೆ ಬಲಾತ್ಕರಿಸಲು ಸನಾತನಿಗೆ ಸಹಾಯಕೊಡುವುದಿಲ್ಲವೆಂತ ಸೂಚಿಸುತ್ತದೆ. ಖಾನೂನಿನಲ್ಲಿ ಇರುವ ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತದಷ್ಟೆ. ಸಾಮಾಜಿಕ ಮತ್ತು ಧಾರ್ಮಿಕ ಅಸ್ಪೃಶ್ಯತೆಯನ್ನು ನಿವಾರಿಸಿ ಕೊಡಲು ಸಹಾಯಕವಾಗಿಲ್ಲ. ಈ ಬಿಲ್ಲಿಗೆ ಮಂಜೂರಾತಿ ಕೊಟ್ಟದ್ದು ಹಿಂದೂ ಸಮಾಜದ ಮತ್ತು ಸುಧಾರಕರ ಸತ್ವ ಪರೀಕ್ಷೆಗೆ ಪಂಥಕಟ್ಟಿದಂತಾಗಿದೆ. ಸುಧಾರಕರು ತಾವು ಹಿಡಿದ ಕಾರ್ಯವನ್ನು ಸರಿಯಾಗಿ ಮುಂದರಿಸಿದರೆ ಹಿಂದೂ ಸಮಾಜವು ತನ್ನ ಶಕ್ತಿಯನ್ನು ತಾನಾಗಿಯೇ ನಿದರ್ಶಿಸುತ್ತದೆ. ಹೀಗೆ ನೋಡುವುದಾದರೆ ಇಂಡಿಯಾ ಸರಕಾರದ ತೀರ್ಮಾನವು ದೇವರ ಇಚ್ಛೆಯನ್ನನುಸರಿಸಿಯೇ ಆಗಿರಬೇಕೆನ್ನಬಹುದು. ಇದರಿಂದ ವಾದಾಸ್ಪದವಾದ ವಿಷಯವೇನೆಂತ ಸ್ಪಷ್ಟವಾಗುತ್ತದೆ. ಇಂಡಿಯಾದಲ್ಲಿ ಈಗ ನಡೆಯುತ್ತಲಿರುವ ವಿಶೇಷ ತರದ ನೈತಿಕ ಹೋರಾಟದ ಮಹತ್ವವು ಇಂಡಿಯಾಕ್ಕೂ ಒಟ್ಟು ಪ್ರಪಂಚಕ್ಕೂ ತಿಳಿಯಲು ಅನುಕೂಲವಾಯಿತು.

ಈ ಪಂಥವನ್ನು ಅಜನ್ಮ ಸುಧಾರಕ ಮತ್ತು ಹೋರಾಡುವವನಾದ ನಾನೂ ಮತ್ತು ಪೂನಾದಲ್ಲಿ ಆದ ರಾಜಿ ತೀರ್ಮಾನಕ್ಕೆ ಸೇರಿದ ಪ್ರತಿಯೊಬ್ಬನೂ ಅಂಗೀಕರಿಸಲೇ ಬೇಕು. ಆ ತೀರ್ಮಾನದ ಮೇರೆ ಸ್ವರಾಜ್ಯ ಸ್ಥಾಪನೆಗೆ ಮುಂಚೆಯೇ ಹರಿಜನರ ಅನಾನುಕೂಲಗಳ ನಿವಾರಣೆಗೆ ಇರುವ ಖಾನೂನಿನ ಅಟಂಕಗಳು ಹೋಗಲಾಡಿಸಲ್ಪಡಬೇಕೆಂತ ಇದೆ. ಈಗ ಒಳ್ಳೇ ಅವಕಾಶದೊರೆತಿದೆ. ಹಿಂದೂ ಧರ್ಮದ ಗೌರವ ಉಳಿಸಬೇಕೆಂತ ಇರುವವರೂ ಹರಿಜನರಿಗೆ ಕೊಟ್ಟಿರುವ ಮಾತನ್ನು ನಡಿಸಬೇಕೆಂತ ಇರುವವರೂ ಈ ಅವಕಾಶವನ್ನು ಕಳಕೊಳ್ಳಲಾರರು. ಅಖಿಲ ಹಿಂದೂಸ್ಥಾನದ ಬಿಲ್ಲನ್ನು ನಾನು ಓದುವಂತೆ ಸನಾತನಿಗಳು ಓದಿದರೆ ಅವರು ಸಹ ಇದಕ್ಕೆ ವಿರೋಧಿಸಲಾರರೆಂತ ನಂಬುತ್ತೇನೆ. ಹರಿಜನರಿಗೆ ಇತರರಂತೆಯೇ ರಾಜಕೀಯ ಹಕ್ಕುಗಳನ್ನು ಕೊಡಲು ತನ್ನು ಅಡ್ಡಿ ಇಲ್ಲವೆಂತ ನನ್ನಲ್ಲಿ ಹೇಳಲಿಲ್ಲವೇ? ಅಂದರೆ ಖಾನೂನಿನ ದೃಷ್ಟಿಯಲ್ಲಿ ಹರಿಜನರನ್ನು ಬೇರೆಯವರ ಸಾಮಾನ್ಯರಂತೆ ನೋಡಲು ಅವರ ಅಡ್ಡಿ ಇಲ್ಲವೆಂತಾಯಿತು. ಧರ್ಮದಲ್ಲಿ ಸರಿಸಮಾನ ಹಕ್ಕು ಸಿಕ್ಕಬೇಕೋ ಬೇಡವೋ ಎಂಬದು ಮಾತ್ರ ಸನಾತನಿಗಳ ಮನಸ್ಸಾಕ್ಷಿಗೆ ಉಳಿದಂಥಾ. ತನ್ನ ಮನಸ್ಸಾಕ್ಷಿಗೆ ತೋರಿದ್ದನ್ನು ಬೇರೆಯವರ ಮೇಲೆ ವಕ್ಕಾಯಪಡಿಸಲು ಅವರಿಗೆ ಖಾನೂನಿನ ಸಹಾಯ ದೊರಕಬಾರದು.

ಸನಾತನಿಗಳು ನನ್ನೊಡನೆ ಸಂಭಾಷಿಸಿದಾಗ ಯಾರಾದರೂ ಹರಿಜನರನ್ನು ಮುಟ್ಟಿದರೆ ಸ್ನಾನ ಮಾಡಬೇಕು, ಅಥವಾ ಸ್ವಲ್ಪ ನೀರು ಕುಡಿಯಬೇಕು ಎಂಬದಕ್ಕೆ ಒಂದು ಶ್ಲೋಕದ ಆಧಾರ ಕೊಟ್ಟಿದ್ದರು. ಹರಿಜನರು ದೇವಸ್ಥಾನ ಅಥವಾ ಸಾರ್ವಜನಿಕ ಸ್ಥಳಗಳಿಗೆ ಹೋದದ್ದಕ್ಕೆ ಅವರಿಗೆ ಯಾವ ಶಿಕ್ಷೆ ಕೊಡಬೇಕೆಂಬದಕ್ಕೆ ಆಧಾರವೇನೂ ಕೊಡಲಿಲ್ಲ. ಒಬ್ಬ ಧಾರ್ಮಿಕ ನಿಯಮಕ್ಕೆ ವಿರೋಧವಾಗಿ ನಡೆದದಕ್ಕೆ ಸಾಮಾಜಿಕ ಖಾನೂನಿನ ಸಹಾಯ ಪಡೆದು ಶಿಕ್ಷಿಸುವುದು ನ್ಯಾಯವಲ್ಲ. ಈಗ ತಂದ ಬಿಲ್ ಅಂಥಾ ಖಾನೂನಿನ ಸಹಾಯ ತೆಗೆದುಕೊಳ್ಳುವುದು ಅಸಾಧ್ಯವಾಗಿ ಮಾಡುತ್ತದೆ.

ಹರಿಜನರನ್ನು ದೇವಸ್ಥಾನಗಳ ಪ್ರವೇಶಕ್ಕೆ ಬಿಡುವುದು ಅನ್ಯೋನ್ಯ ಒಪ್ಪಂದಕ್ಕೆ ಬಿಟ್ಟಿದೆ. ದೇವಸ್ಥಾನಕ್ಕೆ ಹೋಗುವವರ ಮನಸು ಇನ್ನೂ ಒಪ್ಪದಿದ್ದರೆ ಹರಿಜನರಿಗೆ ಪ್ರವೇಶ ದೊರೆಯುವುದಿಲ್ಲ. ಬಹು ಜನರು ಒಪ್ಪುವಲ್ಲಿ ಒಬ್ಬಬ್ಬನ ಅಪೇಕ್ಷೆಯನ್ನು ಹೆಚ್ಚಿನ ಜನರ ಮೇಲೆ ಒತ್ತಾಯಪಡಿಸಲು ಖಾನೂನಿನ ಸಹಾಯ ಪಡೆಯಕೂಡದು. ಸನಾತನಿಗಳು ಹೇಗೆ ನಿರ್ಧೃಸಿಕೊಂಡರೂ ದೇವಸ್ಥಾನಗಳ ಪ್ರವೇಶದ ಸಮಸ್ಯೆಯು ದಕ್ಷಿಣದ ಗುರುವಾಯೂರಿನಿಂದ ಉತ್ತರದ ಹರಿದ್ವಾರದ ವರೆಗೂ ಹಬ್ಬಿತು. ಮತ್ತು ನನ್ನ ಉಪವಾಸವು ಮುಂದರಿಸಲ್ಪಟ್ಟರೂ ಗುರುವಾಯೂರಿನ ದೇವಸ್ಥಾನಕ್ಕೆ ಪ್ರವೇಶಕ್ಕಾಗಿ ವ್ರತವಲ್ಲ, ಹಿಂದೂಸ್ಥಾನದ ಯಾವುದೇ ದೇವಸ್ಥಾನಕ್ಕಾಗಿಯಾದರೂ ಉಪವಾಸ ಮಾಡಬೇಕಾಗಿದೆ.

ನನ್ನ ಜೀವನವೆಲ್ಲಾ ಹೀಗೆಯೇ ಆಗಿರುವುದು. ಒಂದರಿಂದ ಒಂದಕ್ಕೆ ಹುಚ್ಚನ ಹೋಗುತ್ತದೆ. ನಾನು ಬರೇ ಮದ್ರಾಸ್ ಬಿಲ್ಲಿಗೆ ನನ್ನ ದೃಷ್ಟಿಯನ್ನು ಇಟ್ಟಿದ್ದೆ. ಈಗ ದೊಡ್ಡ ಸಮಸ್ಯೆಯೇ ನನ್ನ ಮುಂದೆ ಬಂದಿದೆ ಅದನ್ನು ಎದುರಾಗಲು ತಯಾರಾಗಲೇ ಬೇಕಾಯಿತು.

ಸರ್ಕಾರದ ಅಭಿಪ್ರಾಯದಿಂದ ಈ ಬಿಲ್ಲಿನ ಚರ್ಚೆ ಬಹಳ ಕಾಲ ನಡೆಯಬಹುದೆಂತಲೂ ಕಡೆಗೂ ಖಾನೂನಾಗಲಾರದೆಂತ ಕಂಡುಬರುತ್ತದೆ. ಸರ್ಕಾರವು ಜಾಗರೂಕತೆಯಾಗಿರುವುದರಿಂದ ಹಾಗೆ ಯೋಚಿಸುವುದು ನ್ಯಾಯವೆ. ಆದರೆ ಹಿಂದೂ ಸಮಾಜಕ್ಕೆ ಈಗ ಜಾರಿಯಲ್ಲಿರುವ ಅಸ್ಪೃಶ್ಯತೆಯ ಮೇಲೆ ಅಸಹ್ಯ ಉಂಟಾಗಿದ್ದರೆ ಬಿಲ್ಲನ್ನು ಖಾನೂನಾಗಿ ಅತಿ ಶೀಘ್ರ ಮಾಡಿಕೊಳ್ಳಬಹುದು. ಹಿಂದೂ ಸಮಾಜವು ಬಿಲ್ಲಿನ ಪರ

(4ನೇ ಪುಟದಲ್ಲಿ ಮುಂದುವರಿದಿದೆ.)

ಏಷ್ಯಾಖಂಡದ ಒಡೆತನ ಪಡೆಯಬೇಕೆಂಬ ಜಪಾನಿನ ಮಹದಾಕಾಂಕ್ಷೆ.

ಹೊರಗಿನಿಂದ ನೋಡಿದವರಿಗೆ ಜಪಾನುದೇಶವು ನಾಗರಿಕವಿದೆಯೆಂದು ಕಾಣುವುದು; ಆ ರಾಜ್ಯದ ಮುಖಂಡ ಇಪ್ಪತ್ತನೆಯ ಶತಮಾನದ ಭಾಷೆಯಲ್ಲಿಯೇ ಮಾತನಾಡುತ್ತಾರೆ

ಆದರೆ ಮೇಲಣ ಹೊದಿಕೆಯನ್ನು ಹರಿದು ನೋಡಿದರೆ ಕಾಣುವ ಟಣ್ಣಾವೆ ಬೇರೆ. ಇನ್ನೂ ಮನುಷ್ಯ ಮಧ್ಯಕಾಲದಲ್ಲಿಯೆ ಉಳಿದಿದೆ ಆ ದೇಶದ ಒಳಭಾಗ.

ಜಪಾನಿನಲ್ಲಿ ಮಹಾ ಪ್ರಬಲರಾಗಿರುವವರೆಂದರೆ ಅಲ್ಲಿನ ಸೈನಿಕ ಜಾತಿ (ಕ್ಷತ್ರಿಯ) ಯವರು. ಅವರೆಲ್ಲರೂ ಶ್ರೀಮಂತರೆ. ಮಿಕ್ಕವರು ಈ ಶ್ರೀಮಂತರ ಕೈಕೆಳಗೆ—ಅವರು ಹೇಳಿದ ಹಾಗೆ.

ಈ ಶ್ರೀಮಂತರು ಮಾಡುವ ಕೆಲಸಗಳಿಗೆ ಎರಡು ಮುಖ್ಯವಾದ ಉದ್ದೇಶಗಳು: ಮೊದಲನೆಯದು ವಾಸ್ತವವಾಗಿಯೂ ಸ್ವದೇಶಾಭಿಮಾನ

ಅಲ್ಲಿನ ಯುದ್ಧ ವ್ಯವಸಾಯಿಗಳಾದ ಸಾಮುರಾಯ ಎಂಬ ಪಂಗಡದವರಿಗೆ,

'ಅಖಂಡ ಏಷ್ಯಾಖಂಡವೂ ಸಂಪೂರ್ಣ ಪೆಸಿಫಿಕ್ ಸಾಗರವೂ ತಮ್ಮ ಸರ್ವಾಧಿಕಾರಕ್ಕೆ ಒಳಪಡಬೇಕು''
ಎಂಬ ಮಹತ್ವಾಕಾಂಕ್ಷೆ.

ಇದೇ ಶ್ರೀಮಂತರಿಗೆ ಒಂದು ವಿಚಾರದಲ್ಲಿ ಮಹಾ ಭಯ. ಜಪಾನ್ ದೇಶೀಯ ಪ್ರಜೆಗಳಲ್ಲಿ ಎಲ್ಲಿ ಪ್ರಜಾ ಸ್ವಾತಂತ್ರ್ಯದ ಆಸೆ ಹುಟ್ಟಿ ಪ್ರಜಾಕೋಟಿಯಲ್ಲಿ ಪ್ರಜಾಪಕ್ಷದ ಚಳವಳಿಯು ತಲೆಹಾಕಿಬಿಡುತ್ತದೆಯೋ ಎಂಬ ದಿಗಿಲು. ಇದೇ ಅವರ ಎರಡನೆಯ ಚಿಂತಾಕಾರಣ.

ಈ ದೇಶಿಯರ ಉದ್ದೇಶಗಳನ್ನು ತಿಳಿಯಬೇಕಾದರೆ ಅಲ್ಲಿನ ಸೈನಿಕ ಮತ್ತು ನಾವಿಕ ಪಡೆಗಳ ಅಧಿಕಾರಿಗಳನ್ನು ಕೇಳಬೇಕು. ರಾತ್ರಿಯು ಸವೆಯುತ್ತಾ ಬಂದಂತೆಲ್ಲ ಈ ಅಧಿಕಾರಿಗಳ ನಾಲಿಗೆಗಳು ಸಡಿಲವಾಗುತ್ತಾ ಬರುವವು. ಆಗ ಅವರು ಮುಚ್ಚುಮರೆಯಿಲ್ಲದೆ ತಮ್ಮ ಮನದ ಅಭಿಲಾಷೆಗಳನ್ನು ವ್ಯಕ್ತಗೊಳಿಸುವರು.

ಅವರು ಅಭಿಪ್ರಾಯಪಟ್ಟಿರುವುದು ಈ ರೀತಿ:

'ಆಂಗ್ಲೇಯರ ಪ್ರಜಾಪ್ರಭುತ್ವವು ನಿಸ್ಸೊತ್ವವಾದುದು; ಕೇವಲ ವ್ಯಾಪಂಚಿಕ ವಿಲಾಸವಿಭವವುಳ್ಳದ್ದು.

'ಫ್ರಾನ್ಸು. ಇದು ಇಳಿಮುಖದಲ್ಲಿ ಜಾರುತ್ತಿದೆ. ಒಂದು ವೇಳೆ ಹಾಗೆಯೇ ಇರಲಿ, ಮಗ್ಗುಲಲ್ಲಿ ಪ್ರಜಾಧಿಪತ್ಯವಿರುತ್ತಿರುವ. ನವಜೈತನ್ಯವನ್ನು ಪಡೆಯುತ್ತಿರುವ ಜರ್ಮನಿಯು ಇದರ ಪ್ರಾಬಲ್ಯಕ್ಕೆ ಮುಳಿ. ತಡೆದು ನಿಲ್ಲಿಸುತ್ತದೆ.

'ಇನ್ನು ಇಟಲಿ. ಇಲ್ಲಿನ ಫ್ಯಾಸಿಜಂ ಏನೋ ಬಹಳ ಶಕ್ತಿಸಂಪನ್ನವುಳ್ಳದೇನೊ ಅಹುದು. ಆದರೇನು? ಅದರ ಸ್ಥಾನಬಲವು ಜೆನಾತ್ಮಾಗಿಲ್ಲ; ಸಂಕುಗಳ ಸರಪರಾಜು ಇಲ್ಲ. ಆದುದರಿಂದ ತ್ರಾಣ ಕಡಿಮೆ.'

ಉಳಿದ ಚೀನಾ, ಫ್ರೆಂಚ್ ಇಂಡೊ-ಚೈನಾ, ಇಂಡಿಯಾ, ಕೊನೆಗೆ ಪೌರ್ವಾತ್ಯ ಸೈಬೀರಿಯಾ ಮುಂತಾದ ಈ ರಾಜ್ಯಗಳೆಲ್ಲವನ್ನೂ 'ನಾವು ಕಬಳಿಸಿದಬಹುದುದು' ಎಂಬುದಾಗಿ ಬಗೆಯುತ್ತಾರೆ.

ಮೇಲೆ ಹೇಳಿದ ಸಾಮುರಾಯ್ ಪಕ್ಷದವರು ಎಂದಿನ ತನಕ ಜಪಾನಿನ ರಾಜ್ಯನೀತಿಯ ಸೂತ್ರಗಳನ್ನು ತಮ್ಮ ಕೈಲಿ ಹಿಡಿದುಕೊಂಡು, ಸಂಪೂರ್ಣವಾಗಿ ನಿರಂಕುಶಾಧಿಕಾರವನ್ನುಳ್ಳ ಚಕ್ರವರ್ತಿಗಳನ್ನು ತಿದ್ದುತ್ತಿರುವರೊ, ಅಂದಿನ ವರೆಗೂ ಅವರಿಂದ ಪ್ರಪಂಚಕ್ಕೆ ತುಂಬಾ ಅಪಾಯವುಂಟು. ಇವರಿಂದ ಹಿಂದೆ, ಕೈಸರರಿಂದುಂಟಾಗಿದ್ದ, ನೆಪೋಲಿಯನ್‌ರವರಿಂದ ಪ್ರಾಪ್ತವಾಗಿದ್ದ ಅಪಾಯಕ್ಕಿಂತಲೂ ಹೆಚ್ಚು ಅಪಾಯವಾಗುವ ಸಂಭವವುಂಟು.

ಇವರು ಎಷ್ಟೆಷ್ಟರಮಟ್ಟಿಗೆ ತಮ್ಮ ಚಕ್ರಾಧಿಪತ್ಯವನ್ನು ವಿಸ್ತರಗೊಳಿಸುತ್ತಾ ಹೋಗುವರೊ ಅಷ್ಟಷ್ಟರಮಟ್ಟಿಗೆ ಇವರ ಭಾವಿ ಅಧಿಕಾರವು ಚಲಾಯಿಸಲ್ಪಡುವುದು.

ಜಪಾನಿನವರು ತಮ್ಮ ಭವಿಷ್ಯವನ್ನು ತಿದ್ದುವುದರಲ್ಲಿ ಎಷ್ಟು ಕುತೂಹಲರಾಗಿದ್ದಾರೆಂಬುದನ್ನು ಅವರ ದೇಶದ ಕೆಲವು ಕಾರ್ಯಕಲಾಪಗಳನ್ನು ನೋಡಿದರೆ ತಿಳಿಯಬಹುದು.

೧೯೩೭ರಲ್ಲಿ ಅವರ ಮುಖ್ಯ ಮಂತ್ರಿಯಸರಾದ ಪ್ರೀಮಿಯರ್ ಟನಕ ಎಂಬುವರು ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬಂದು ತಮ್ಮ ಚಕ್ರವರ್ತಿಯವರಿಗೆ ವಂದಿಯನ್ನೊಪ್ಪಿಸಿದರು.

ಈ ಗುಪ್ತ ವಂದಿಯು ಹಾಗೂ ಬಯಲಿಗೆ ಬಂದುಬಿಟ್ಟಿತು. ಜಪಾನಿನ ವಿದೇಶಾಂಗ ಕಛೇರಿಯಲ್ಲಿ ಕೆಲಸಮಾಡುತ್ತಿದ್ದ ಚೀನಾ ತರ್ಜುಮೆದಾರನು ಆ ವಂದಿಯನ್ನು ಕದ್ದು ತನ್ನ ದೇಶಕ್ಕೆ ಕಳುಹಿಸಿಬಿಟ್ಟನು. ಅದನ್ನು ಕುಯೊ-ಮಿಂಗ್-ಟಾಂಗ್ ಎಂಬ ಚೀನೀಯ ಪ್ರಗತಿಪಕ್ಷದವರು ಪ್ರಸಿದ್ಧಿಪಡಿಸಿದರು.

''ಇದು ಶುದ್ಧಾಂಗವಾಗಿ ಸಳ್ಳು'' ಎಂಬುದಾಗಿ ಕೂಡಲೆ ಜಪಾನಿನ ವಿದೇಶಾಂಗ ಕಛೇರಿಯವರು ಹೇಳಿದರು ಆದಾಗ್ಯೂ ಅದು ವಾಸ್ತವವೆಂದು ಹೇಳಲು ಸಾಕಾದಷ್ಟು ಕಾರಣಗಳೇನೊ ಇವೆ.

ಈ ವರದಿಯಲ್ಲಿ,

ಮಂಚೂರಿಯೂ ದೇಶದಲ್ಲಿ ಅವರು ಮಾಡಬೇಕೆಂದಿದ್ದ ಕೆಲಸ ಕಾರ್ಯಗಳ ವಿಧಾನಗಳೆಲ್ಲವೂ ಇದ್ದವು ಮಂಗೋಲಿಯಾ ರಾಜಪುತ್ರರಿಗೆ ಲಂಚವನ್ನು ಕೊಟ್ಟ ಅಲ್ಲಿ ತಮ್ಮ ಕೆಲಸವನ್ನು ಸಾಧಿಸಿಕೊಳ್ಳುವ ಮಾರ್ಗಗಳೆಲ್ಲವೂ ಇದ್ದವು.

ಅನಂತರ ಅವರ ದೃಷ್ಟಿಯು ಹೊರಳಿರುವುದು ಯಾಂಗ್‌ಟ್ಸಿ ವ್ಯಾಲಿಯ ಮೇಲೆ. ಇದರಿಂದ ಸಂಪೂರ್ಣವಾಗಿ ಮಧ್ಯದ ಚೀನಾದೇಶವೆಲ್ಲವೂ ಅವರ ವಶಕ್ಕೆ ಬಂದಂತಾಗುವುದು. ಆ ಮೇಲೆ ಕ್ಯಾಂಟನ್ನನ್ನು ಹಿಡಿದು ದಕ್ಷಿಣಭಾಗದ ಚೀನಾದೇಶವನ್ನು ಹಿಡಿಯುವುದು.

ಇದೇ ರೀತಿ ಕೆಲವು ವರ್ಷಗಳು ನಡೆಸಿದ ನಂತರ, ಚೀನಾರಾಷ್ಟ್ರದ ಬಹು ಭಾಗವೆಲ್ಲವೂ, ಅವರ ಪ್ರಭುತ್ವದ ಕೈಕೆಳಗಿನ ಹುದ್ದೆದಾರರಿಂದಲೊ, ಮಾಂಡರೀನ್‌ರವರಿಂದಲೊ ಆಳಲ್ಪಡುತ್ತ, ಜಪಾನ್ ಚಕ್ರಾಧಿಪತ್ಯಕ್ಕೆ ಸೇರಿಹೋಗುವುದು.

ಇದಾದ ಮೇಲೆ ಫ್ರೆಂಚ್ ಇಂಡೋ ಚೈನಾ; ಅನಂತರ ಫಿಲಿಪೈನ್ ದ್ವೀಪಸ್ತೋಮ ಮತ್ತು ಡಚ್ ಈಸ್ಟ್ ಇಂಡೀಸ್.

ಇಷ್ಟು ರಾಜ್ಯಗಳು ಅವರ ಆಳ್ವಿಕೆಗೆ ಒಳಪಟ್ಟವೆಂದರೆ ಇಂಡಿಯಾದೇಶವನ್ನು ಈಶಾನ್ಯ ಮೂಲೆಯಿಂದ ಆಕ್ರಮಣ ಮಾಡಲು ಸುಲಭ. ಅವರಲ್ಲಿ ಈಗಿನ ಸಾಧನಗಳಾದ ಏರ್‌ಪ್ಲೇನುಗಳಿಂದ ತೀರ ಸುಲಭವಾಗುವುದು.

''ಇಂಡಿಯಾ ದೇಶವನ್ನು ಬಿಕ್ಕಟ್ಟಿನಲ್ಲಿಟ್ಟುಕೊಂಡು ರಾಜ್ಯಭಾರ ನಡೆಸಬೇಕಾದರೆ ಬಲವಾದ ವಿದೇಶದ ಸರಕಾರವೇ ಇರಬೇಕು; ಇದು ಮೇಲಿನಿಂದ ಆಳಬೇಕು,'' ಎಂಬುದಾಗಿ ಜಪಾನಿನ ಚಕ್ರಾಧಿಪತ್ಯವಾದಿಗಳ ನಂಬಿಕೆ.

ಮಂಗೋಲಿಯಾದ ಹೊರಭಾಗವನ್ನೂ, ಪೂರ್ವದಿಕ್ಕಿನ ಸೈಬೀರಿಯಾವನ್ನೂ ನಿಧಾನವಾಗಿ ಜಯಿಸಿ ಹುದೆಂದು ಅವರ ಅಭಿಪ್ರಾಯ. ಆದರೆ ''ನಾವು ಒಂದು ದಿನವಲ್ಲದಿದ್ದರೆ ಒಂದು ದಿನವಾದರೂ ಇಡೀ ಏಷ್ಯಾಖಂಡವನ್ನೇ ಕೈಯಲ್ಲಿಟ್ಟುಕೊಳ್ಳಬೇಕು ಯಾಕೆಂದರೆ ಏಷ್ಯಾಖಂಡವನ್ನು ಯಾರ ಕೈಲಿರುತ್ತದೊ ಅವರೇ ಜಗತ್ತಿನಲ್ಲಿ ಪ್ರಧಾನರು''

ಇದಿಷ್ಟೂ ಜಪಾನಿನ ಮಹತ್ವಾ ಕಾಂಕ್ಷೆ.

ಜಪಾನ ಪ್ರಭುತ್ವದಲ್ಲಿ ಒಂದು ವಿಶೇಷ. ಯುದ್ಧದ ಖಾತೆಗಳಿಗೂ ಸರಕಾರಕ್ಕೂ ಸಂಬಂಧವಿಲ್ಲ. ಸರಕಾರದಿಂದ ಹೊರತಾಗಿವೆ ಸೈನ್ಯದ ಮತ್ತು ನಾವಿಕ ಬಲದ ಮುಖ್ಯಾಧಿಕಾರಿಗಳು ಕೇವಲ ಚಕ್ರವರ್ತಿಯವರಿಗೆ ಮಾತ್ರ ಜವಾಬ್ದಾರರು ಸರಕಾರಕ್ಕಲ್ಲ.

ಈ ಭೂ ಸೈನ್ಯ ಜಲ ಸೈನ್ಯದ ಇಲಾಖೆಗಳಲ್ಲಿನ ಭಾರಿ ಭಾರಿ ಹುದ್ದೆಗಳೆಲ್ಲವೂ ಮೇಲೆ ಹೇಳಿದ ಸಾಮುರಾಯಿ ಪಂಗಡದವರ ಕೈಲಿವೆ. ರಾಜ್ಯದ ಉದ್ಯೋಗಸ್ಥರಾದ ರಾಜನೀತಿ ವಿಶಾರದರು ಏನು ಬೇಕಾದರೂ ತಿಳಿದುಕೊಳ್ಳಲಿ, ಭೂ ಸೈನ್ಯ ಜಲ ಸೈನ್ಯಗಳವರು ಮೂಕ ತಾವು ನೂಡಿದ ಕೆಲಸವೇ ಸರಿ ಎಂಬುವುದಾಗಿ ತಿಳಿದಿದ್ದಾರೆ.

ಈಚೆಗೆ ನಡೆದ ಕೆಲವು ಸಂಗತಿಗಳನ್ನು ನೋಡಿ ತಾಳೆ ಹಾಕಿದರೆ ಜಪಾನಿನ ಯುದ್ಧ ವ್ಯವಸಾಯಿಗಳು ಎಷ್ಟು ಸ್ವತಂತ್ರರಾಗಿದ್ದಾರೆಂಬುದು ಕಂಡು ಬರುವುದು. ಇದು ವರೆವಿಗೂ ನಡೆದಿರುವ ವಿದ್ಯಮಾನಗಳೆಲ್ಲವೂ ಆ ಮುಖ್ಯ ಮಂತ್ರಿ ಟನಕರವರು ಹೇಳಿರುವ ಮಾರ್ಗದಲ್ಲಿಯೇ ಚಾಚೂ ತಪ್ಪದೆ ನಡೆದಿವೆ.

ಜಪಾನಿನಲ್ಲಿ ಹೀಗಿದ್ದರೆ ಇತರ ರಾಷ್ಟ್ರಗಳು ಸುಮ್ಮನಿವೆಯೇ ಎಂದು ಕೇಳಬಹುದು. ಮಾಸ್ಕೊ—ಟೋಕಿಯೊ ನಗರಗಳ ಮಧ್ಯೆ ಒಂದು ಒಪ್ಪಂದವಿನೆಯೆಂದು ಎಲ್ಲರೂ ನಂಬಿದ್ದಾರೆ. ಹೊರಗಿನ ಮಂಗೋಲಿಯಾ ರಾಜ್ಯವು ಹೆಸರಿಗೆ ಮಾತ್ರ ಸೋವಿಯೆಟ್ ಸರ್ಕಾರಕ್ಕೆ ಸೇರಿದೆ. ಇಷ್ಟರವರೆಗೆ ನಡೆದಿರುವ ಒಪ್ಪಂದದ ರೀತಿಯು ಜಪಾನಿನವರು ಮಂಗೋಲಿಯಾ ತಂಟೆಗೆ ಬರುವುದಿಲ್ಲವಂತೆ. ಇದು ನಿಜವಾಗಿದ್ದ ಭಾಗದಲ್ಲಿ ಜಪಾನು ಚೀನಾದಲ್ಲಿ ಏನೇ ದಾಳಿ ನಡೆಸಲಿ ರಷ್ಯಾದೇಲಿವು ಹೆಚ್ಚಿಕೊಳ್ಳುವುದಿಲ್ಲ. ಅದೂ ಅಲ್ಲದೆ ರಷ್ಯಾ ದೇಶಕ್ಕೆ ಕೆಲವು ಪಾಶ್ಚಿಕೃತಿಕ ತೊಂದರೆಗಳೂ ಇಲ್ಲದಿಲ್ಲ. ಪೌರಾತ್ಯ ಸೀಮೆಗಳಲ್ಲಿ ರಷ್ಯಾ ದೇಶವು ಸದ್ಯಕ್ಕೆ ಯುದ್ಧ ಮಾಡುವಂತಿಲ್ಲ ಯಾಕೆಂದರೆ, ರಷ್ಯಾದಿಂದ ಸೈಬೀರಿಯಾಕ್ಕೆ ಬರಲು ಇರುವ ಒಂದೇ ಒಂದಾದ ಟ್ರಾನ್ಸ್ ಸೈಬೀರಿಯನ್ ಸೈಬೀರಿಯನ್ ರೈಲ್ವೆಯು ಜೆನಾತ್ಮಾಗಿಲ್ಲ. ಸೈಬೀರಿಯಾದಲ್ಲಿ ಸಾಮಾನ್ಯವಾಗಿ ರಸ್ತೆಗಳೇ ಇಲ್ಲ. ಇರುವುದೊಂದೇ—ಈ ರೈಲು. ಶೀತ ಕಾಲದಲ್ಲಿ ಈ ರೈಲೂ ಕಷ್ಟ. ಹಾಯುವುದಕ್ಕಾಗುವುದಿಲ್ಲ. ರಷ್ಯಾ ದೇಶದಿಂದ ಒಂದು ದೊಡ್ಡ ಸೈನ್ಯವನ್ನು ಸಾಗಿಸುವುದಕ್ಕೆ ಮಹಾ ಕಷ್ಟ; ಎಷ್ಟೋ ತಿಂಗಳುಗಳ ಕಾಲ ಹಿಡಿಯುವುದು. ಆನಂತರ ಅದಕ್ಕೆ ಸರಪರಾಜಿಗೂ ಕಷ್ಟ;

ಹಾಗಾದರೆ ಫ್ರಾನ್ಸಿನ ವಿಚಾರವೇನು? ಇದು ಹಾಗೆಯೇ ಅಂತೆ. ಟೋಕಿಯೋ ವ್ಯಾಪಾರಸ್ಥರ ನಡುವೆ ಒಂದು ಖಚಿತವಾಗಿದೆಯೆಂಬ ವರ್ತಮಾನ. ಇದರ ಪ್ರಕಾರ, ಜಪಾನಿನವರು ಮಂಚೂರಿಯಾ ದೇಶದಲ್ಲಿ ಏನು ಬೇಕಾದರೂ ಮಾಡಿಕೊಳ್ಳಬಹುದಂತೆ. ಯಾಕೆಂದರೆ ಅಲ್ಲಿ ಕೆಲವು ಫ್ರೆಂಚರ ಆಸ್ತಿಗಳಿವೆ. ಫ್ರಾನ್ಸಿನ ಈ ಉಪಕಾರಕ್ಕೆ ಪ್ರತಿಯಾಗಿ ಫ್ರಾನ್ಸಿಗೆ ಒಂದು ಉಪಕಾರವನ್ನು ಮಾಡಲೊಪ್ಪಿದೆಯಂತೆ. ಏನೆಂದರೆ ಮಹಾ ಯುದ್ಧ ಶಾಂತಿಯು ಕರಾತುಗಳಾಗಿವೆಯಲ್ಲ ಅವುಗಳನ್ನು ತಿದ್ದುಪಾಟುಮಾಡುವಂತೆ ಜಪಾನ್ ಸರ್ಕಾರವು ಅಡ್ಡಿ ಬಂದು ಫ್ರೆಂಚ್ ಸರ್ಕಾರಕ್ಕೆ ಬೆಂಬಲವಾಗಿ ನಿಲ್ಲುತ್ತದೆಯಂತೆ

ಈಗ ಏಷ್ಯಾ ಖಂಡದಲ್ಲಿ ಪ್ರಜಾಸಂಖ್ಯೆಯು ಬೆಳೆದು ಹೋಗಿದೆ. ಹೀಗಿರುವಾಗ ಎಲ್ಲಾ ವ್ಯಾಪಾರಗಳನ್ನೂ ಕೈಗಾರಿಕೆಗಳಲ್ಲಿ ಉಪಯೋಗವಾಗುವ ಅಸಿದ್ಧ ಪದಾರ್ಥಗಳನ್ನೂ, ಅಲ್ಪ ಸಂಬಳದ ಕೂಲಿಗಳನ್ನೂ ತಮ್ಮ ವಶದಲ್ಲಿಟ್ಟುಕೊಳ್ಳಬೇಕೆಂಬುವುದೇ ಜಪಾನಿನವರ ಇಚ್ಛೆ ಎಂಬ ಸುದ್ದಿಯು ಬಹು ತೆರನಾಗಿ ನಿಜ.

ಜನಗಳಿಲ್ಲದ ಅಥವಾ ಎಲ್ಲೊ ಅಲ್ಪ ಸ್ವಲ್ಪ ಪ್ರಜಾ ಸಂಖ್ಯೆ ಇರುವ ವಿಷ್ಯಾದ ಭಾಗಗಳು ಅಂದರೆ ಪೌರ್ವಾತ್ಯ ಸೈಬೀರಿಯಾ ಮುಂತಾದವು ಪ್ರದೇಶಗಳು ಜಪಾನಿನವರ ಸ್ವಾಸ್ಥ್ಯಕ್ಕೆ ಪ್ರಯೋಜನವಿಲ್ಲ. ಅಲ್ಲದೆ ಅಲ್ಲಿನ ವಾಯುಗುಣವೆ ಮುಂತಾದ ಅವರಿಗೆ ಸರಿಬೀಳುವಂತಿಲ್ಲ. ಆದುದರಿಂದ 'ತಮ್ಮ ಹೆಚ್ಚಿರುವ ಪ್ರಜಾಸಂಖ್ಯೆಗಾಗಿ ಜಪಾನಿನವರು ರಾಜ್ಯ ವಿಸ್ತಾರ ಮಾಡುತ್ತಿದ್ದಾರೆಂದು' ಹೇಳುವುದು ತಪ್ಪು.

ಜಪಾನಿನವರು ಕೊರಿಯಾ ದೇಶವನ್ನು ಸೇರಿಸಿಕೊಂಡು ಅಲ್ಲಿ ಪ್ರಭುತ್ವವನ್ನು ಒಪ್ಪುತ್ತೇವೆಂದು ಹೇಳಿದಾಗಲೂ ಇದೇ ರೀತಿ ಸುದ್ದಿ ಇತ್ತು. ಈಗ ಎರಡು ತಲಾಂತರಗಳಾದವು ಜಪಾನಿನವರು ಅಲ್ಲಿ ಹೋಗಿ ನೆಲಸಿರುವುದನ್ನೂ ತಪ್ಪಿಲ್ಲ.

ಈಗ ಜಪಾನಿನವರು ಸಹಾ 'ಬಸಲು ಬೀಳುವ ಭೂಮಿಯ ವೇಲೆಲ್ಲಾ ಜಪಾನಿನವರು' ಎಂಬಂತೆ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ತಮ್ಮ ರಾಷ್ಟ್ರವನ್ನು ಬಲಪಡಿಸಿಕೊಂಡು ತಮಗೂ ಮಹಾ ರಾಷ್ಟ್ರಗಳ ಜೊತೆಯಲ್ಲಿ ಸಮಾನವಾದ ಹಕ್ಕು ಬಾಧ್ಯತೆಗಳನ್ನು ದೊರಕಿಸಿಕೊಳ್ಳಬೇಕೆಂದು ಬಗೆದಿದ್ದಾರೆ.

ಈಗಿನ ಜಗತ್ತಿನ ಆರ್ಥಿಕ ಅವ್ಯವಸ್ಥೆಯಲ್ಲಿ ಜಪಾನಿನವರಿಗೆ ಪೂರಾ ಪೆಟ್ಟು ಬಿದ್ದಿದೆ. ಏಪರೇತವಾದ ವೆಚ್ಚ ಬೀಳುವ ಸೈನ್ಯದ ಇಲಾಖೆ, ಮಹಾ ತೊಡಕಾದ ಸರ್ಕಾರದ ಬರಾವರ್ದು, ರಾಜ ನಿರ್ಮಿತವಾದ ಅಧಿಕಾರಿಗಳ ಅಧಿಕ ಸಂಖ್ಯೆಯ ವೆಚ್ಚ ಇತ್ಯಾದಿಗಳಿಂದ ಆರ್ಥಿಕ ದುರವಸ್ಥೆಯು ಬಹಳವಾಗಿ ಬಿಟ್ಟಿದೆ. ಜಪಾನಿನ ಆರ್ಥಿಕ ಪರಿಸ್ಥಿತಿಯು ದಿನೇ ದಿನೇ ಕಷ್ಟಕರವಾಗುತ್ತಿದೆ. ಪ್ರಜೆಗಳು ನಿರ್ಗತಿಕರಾಗುತ್ತಿದ್ದಾರೆ. ರೈತರೂ—ಕಾರ್ಖಾನೆಯ ಕೂಲಿಗಾರರೂ ಕಷ್ಟಪಡುತ್ತಿದ್ದಾರೆ. ಇದರಿಂದ ರಾಜ್ಯದಲ್ಲಿ ಅತೃಪ್ತಿಯುಂಟಾಗಿದೆ. ಈಗಾಗಲೇ ಇಲ್ಲಿ ಕಮ್ಯುನಿಸ್ಟ್ ಚಳವಳವು ಒಳಗೇ ಬೆಳೆಯುತ್ತಿದೆಯಂತೆ.

ಆದಕಾರಣ, ಜಪಾನಿನ ರಾಜ ಮನೆತನದವರಿಗೆ ಎರಡು ಅಪಾಯಗಳುಂಟು.

ಮೊದಲನೇಯದು—ಹೆಚ್ಚುತ್ತಿರುವ ಆರ್ಥಿಕ ಇಕ್ಕಟ್ಟು ತನ್ಮೂಲಕ ಸ್ವರಾಷ್ಟ್ರದಲ್ಲಿ ರಾಜಕೀಯ ಅತೃಪ್ತಿ. ಇದರಿಂದ ಜಪಾನಿನ ಸಮೂಹದ ಸ್ಥಿರತೆಗೂ ಮತ್ತು ದೈವ ವಂಶಜರಾದ ರಾಜ ಮನೆತನಕ್ಕೂ ಭಯವುಂಟು.

ಮತ್ತೊಂದು ಅಪಾಯವೇನೆಂದರೆ—ಜಪಾನಿನವರು ಚಕ್ರಾಧಿಪತ್ಯದ ವೇಲೆಗಳನ್ನು ಬೆಳೆಯಿಸುವ ಕೆಲಸದಲ್ಲಿ ಮುಖ್ಯ ಮಂತ್ರಿ ಟನಕರವರು ಹೇಳಿರುವಂತೆ ಬಹಳ ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಈ ರಾಷ್ಟ್ರಕ್ಕೂ, ಸ್ಪಸುಜದ ಇತರ ಭಾರಿ ರಾಷ್ಟ್ರಗಳಿಗೂ—ಅಂದರೆ ಮುಖ್ಯವಾಗಿ, ಇಂಗ್ಲೆಂಡ್ ಮತ್ತು ಅಮೇರಿಕಾಗಳೊಂದಿಗೆ—ತಿಕ್ಕಾಟ ಉಂಟಾಗಬಹುದು.

ಆದರೆ ಈ ಎರಡು ಅಪಾಯಗಳ ಪೈಕಿ, ಎರಡನೆಯದಾದ ಚಕ್ರಾಧಿಪತ್ಯ ವಿಸ್ತಾರವು ಅಷ್ಟು ಅಪಾಯಕರವೆಂಬುವುದಾಗಿ ತೋರುವುದಿಲ್ಲ.

'ಪ್ರಜಾಮತ'

---

೨೭ ರಾಜದ್ರೋಹಿಗಳಿಗೆ ಶಿಕ್ಷೆ.

೩ ವರ್ಷ ೧೦ ತಿಂಗಳು ವಿಚಾರಣೆ! ೧೬ ಲಕ್ಷ ರೂ. ಗಳ ವೆಚ್ಚ!

೨೦—೩—೧೯೨೯ನೆಯ ದಿನ ಭರತಖಂಡದ ಬೇರೆ ಬೇರೆ ಕಡೆ ೩೧ ಮಂದಿಯ ದಸ್ತಗಿರಿಯಾಯಿತು. ಅನೇಕ ಮನೆಗಳ ಪರೀಕ್ಷೆಗಳಾದವು. ಕಾಗದ ಪತ್ರಗಳನ್ನು ಬಂಡಿಬಂಡಿಗಳಲ್ಲಿ ಹೇರಿಕೊಂಡ ಬಂದರು. ೩೧ ಮಂದಿಯ ಮೇಲೂ ಪಿತೂರಿ ಮೊಕದ್ದಮೆಯು ಮೀರತ್ತಿನಲ್ಲಿ ಸೊದಲಾಯಿತು. ವಿಚಾರಣೆಯು ಅಡಿಷನಲ್ ಮ್ಯಾಜಿಸ್ಟ್ರೇಟರ ಮುಂದೆ ೧೨—೬—೩೨ನೇ ದಿನ ಆರಂಭವಾಯಿತು. ಅಪರಾಧಿಗಳ ಮೇಲೆ ಹೊರಿಸಿದ ತಪ್ಪು ಇದು.

''ಅವರಾಧಿಗಳೆಲ್ಲ ಪಿತೂರಿ ನಡೆಸಿ ಭಾರತ ಸಾಮ್ರಾಟರಾದ ಸಾರ್ವಭೌಮ ಪಂಚಮ ಜಾರ್ಜರನ್ನು ಸಿಂಹಾಸನದಿಂದ ಉರುಳಿಸಬೇಕೆಂದು ಸಂಕಲ್ಪಮಾಡಿದರು. ಇದನ್ನು ಸಾಧಿಸಲು ಭರತಖಂಡದಲ್ಲಿ ಕ್ರಾಂತಿಯನ್ನುಂಟುಮಾಡಬೇಕೆಂದು ನಿರ್ಧಾರಮಾಡಿದರು. ಅವರಾಧಿಗಳು ಬಯಸಿದುದು ರಾಷ್ಟ್ರೀಯ ಕ್ರಾಂತಿಯಲ್ಲ. ರಾಷ್ಟ್ರವಿಘಾತುಕ ಕ್ರಾಂತಿಯನ್ನು. ಅವರು ಸಾರ್ವಭೌಮ ಪಂಚಮ ಜಾರ್ಜರನ್ನು ಸಿಂಹಾಸನದಿಂದಿಳಿಸಿ ಆ ರಾಜ್ಯಸೂತ್ರಗಳನ್ನು ರಷ್ಯದ ರಷ್ಯಾಸೋವಿಯಟ್ ಸರಕಾರದ ಸ್ವಾಧೀನಕ್ಕೆ ಕೈಲಿಡಬೇಕೆಂದು ನಿಶ್ಚಯಮಾಡಿದರು ಅವರಾಧಿಗಳೆಲ್ಲರೂ ಬೊಲ್‌ಷೆವಿಕಿಗಳು 'ಬೊಲ್‌ಷೆವಿಕಿಗಳಂದರೇನು? ಇವರಿಗೆ ದೇಶಭಕ್ತಿ ಇಲ್ಲ; ದೇಶದ್ರೋಹಿಗಳು; ಇವರಿಲ್ಲ ನಾಸ್ತಿಕರು ಸಂಸಾರ ಪ್ರೇಮವೇ ಇವರಿಗೆ ತೂನ್ಯ ಮೂ

ನವನಿಗೆ ಸಹಜ, ನ್ಯಾಯವಾಗಿ ಕಾಣಬರುವುದಕ್ಕೆಲ್ಲ ಇವರು ವೈರಿಗಳು. ಇವರ ವಿರೋಧಿಗಳನ್ನು ಕೊಲ್ಲುವುದೇ ಇವರ ಪರಮೋದ್ದಿಶ್ಯ. ಈ ಅಪರಾಧಿಗಳಿಗೂ ಭರತಖಂಡ ಯೂರೋಪಿನ ೬೩ ಸಂಸ್ಥೆಗಳಿಗೂ ಸಂಬಂಧವಿದೆ."

ಇದೇ ಆಪಾದನೆ. ಮ್ಯೂಜಿಸ್ಟ್ರೇಟ್ ಕೋರ್ಟಿನಲ್ಲಿ ಪೊಲೀಸಿನ ಪರವಾಗಿ ೩೨೦ ಸಾಕ್ಷಿಗಳ ವಿಚಾರಣೆಯಾಯಿತು. ೭೦೦೦ ಪುಟಗಳ ಸಾಕ್ಷಿ ಸಾಹಿತ್ಯ ವಾಯಿತು. ೧೪—೧—೧೯೩೦ ರಲ್ಲಿ ಅಪರಾಧಿಗಳನ್ನು 'ಛಾರ್ಜು' ಮಾಡಿದರು. ೩೧ ಮಂದಿ 'ಸೆಷನ್‌ಕೋರ್ಟಿ'ನಲ್ಲಿ ನಿಲ್ಲಬೇಕಾಯಿತು. 'ರಿವ್ಯೂಂಡ್' ಕಾಲ ಬಿಟ್ಟು ಕೆಳಗಿನ ಕೋರ್ಟಿನಲ್ಲಿ ವಿಚಾರಣೆಯು ೭ ತಿಂಗಳು ನಡೆಯಿತು. ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡಲಿಲ್ಲ.

೩೧—೧—೧೯೩೦ ರಲ್ಲಿ 'ಸೆಷನ್‌ಕೋರ್ಟಿ'ನಲ್ಲಿ ವಿಚಾರಣೆ ಆರಂಭವಾಯಿತು. ಈ ಕಾಲದಲ್ಲಿ ಅಪರಾಧಿಗಳು ಹಲವರು ರೋಗಗ್ರಸ್ಥರಾದ ಕಾರಣ ಜಾಮೀನು ಮೇಲೆ ಬಿಡಲಾಗಿತ್ತು. ೧೪ ತಿಂಗಳು ಕಾಲ ಪೊಲೀಸಿನವರು ೨೮೧ ಸಾಕ್ಷಿಗಳನ್ನು ಮುಂದಿಟ್ಟು ಆಪಾದನೆಯನ್ನು ೧೭—೩—೧೯೩೦ ಕ್ಕೆ ಮುಗಿಸಿದರು. ಇದಾದ ಮೇಲೆ ಅಪರಾಧಿಗಳೆಲ್ಲ ತಮ್ಮ ತಮ್ಮ ವಾಙ್ಮೂಲಗಳನ್ನು ಕೊಟ್ಟರು. ಇದಕ್ಕೆ ೧೦ ತಿಂಗಳು ಕಾಲ ಹಿಡಿಯಿತು. ವಾಙ್ಮೂಲಗಳು ಸುಮಾರು ೭೦೦೦ ಪುಟಗಳಿವೆ ಅಪರಾಧಿಗಳಲ್ಲಿ ಒಂದು ಗುಂಪಿನವರು 'ಕಮ್ಯೂನಿಸ್ಟ್' ತತ್ವಗಳನ್ನೇ ಪ್ರತಿಪಾದಿಸಿ ತಾವು ಮಾಡಿದ್ದ ನ್ಯಾಯವೆಂದು ಹೇಳಿದರು. ಮಾರ್ಕ್ಸ್ ಲೆನಿನ್ ಇವರ ಸಿದ್ಧಾಂತಗಳನ್ನು ಒಪ್ಪಿಕೊಂಡರು. ೧೪ ಮಂದಿ ಈ ಗುಂಪು ಎರಡನೆ ಗುಂಪಿನವರು 'ನಾವು ಕಮ್ಯೂನಿಸ್ಟರಲ್ಲ' ವೆಂದರು. ಕಾಂಗ್ರೆಸಿನವರೋ, ಕೂಲಿಗಾರಪಂಥದವರೋ, ಸಮಾಜವಾದಿಗಳೋ ಹೌದೆಂದು ಹೇಳಿದರು.

ಕಮ್ಯೂನಿಸ್ಟ್ ಅಪರಾಧಿಗಳೆಲ್ಲ ಹಲವು ವಿದೇಶೀಯ ಸಾಕ್ಷಿಗಳ ಪಟ್ಟಿಕೊಟ್ಟರು. ಅದಕ್ಕೆ ಅವಕಾಶ ಸಿಗಲಿಲ್ಲವಾಗಿ 'ನಾವು ವಾದಿಸುವುದೇ ಇಲ್ಲ'ವೆಂದುಬಿಟ್ಟರು ಇತರರು ೩೬ ಸಾಕ್ಷಿಗಳ ವಿಚಾರಣೆ ಮಾಡಿದರು ೨೫—೩—೩೨ ಕ್ಕೆ ಇದು ಮುಗಿಯಿತು. ಈ ಗುಂಪಿನ ಹಲವಪರಾಧಿಗಳು ತಾವೇ ವಾದಿಸಿದರು. ಮಿ. ಕೆಂಪರು ಸರಕಾರದ ಪರವಾಗಿ ೧೬—೬—೩೨ ರಲ್ಲಿ ವಾದವನ್ನಾರಂಭಿಸಿ ೧೫—೮—೩೨ ಕ್ಕೆ ಮುಗಿಸಿದರು. ಮೂರನೆಯ ದಿನ ಪಂಚಾಯಿತರ ಮತ ತೆಗೆದುಕ್ಕೊಂಡದ್ದಾಯಿತು. ಅವರೆಲ್ಲ ಬೇರೆ ಬೇರೆ ತೀರ್ಮಾನ ಕೊಟ್ಟರು. ಎಲ್ಲರೂ ೧೭ ಮಂದಿ ಅಪರಾಧಿಗಳೆಂದರು. ೫ ಮಂದಿ ನಿರಪರಾಧಿಗಳೆಂದರು. ಉಳಿದವರನ್ನು ಮೊದಲಿಲ್ಲಿಂದು ಸಂಖ್ಯಾತರು 'ನಿರಪರಾಧಿ'ಗಳೆಂದು ಹೇಳಿದರು ೨೯—೯—೩೨ ರಲ್ಲಿ ಅಪರಾಧಿ ತೆಂಗಡಿಯು ಸತ್ಯನು ೧೬—೧—೧೯೩೨ ನೆಯ ದಿನ 'ಸೆಷನ್ ಜಡ್ಜಿ'ಗಳಾದ ಮಿ. ಯೂರ್ಕರು ೧೨ ಗಂಟೆಗೆ ಸರಿಯಾಗಿ ತೀರ್ಮಾನಕೊಟ್ಟರು.

ವಿ. ಕ.

COORG DISTRICT MAGISTRATE'S OFFICE

Mercara, dated the 24th January 1933.

NOTIFICATION.

Tenders are invited for the supply of three new dugout boats of hebbalsu of the dimensions given below :—

Rampur	32 ft.	by 4 ft
Sirangala	31½ ft.	by 3½ ft.
Kondangeri	32 ft.	by 4 ft.

The boats must be well balanced and executed properly and should be ready for delivery by the 30th April 1933. They will not be accepted unless they are passed by the undersigned or any officer authorised by him in that behalf

The boats should be delivered at the ferries for which they are intended.

The tender should specify the price at which the boat would be delivered at the ferry and be addressed to the District Magistrate of Coorg, the cover being sealed and registered, and superscribed with the words "Tender for the supply of boat for the .... ferry." Tenders should reach this office on or before the 15th March 1933 accompanied by a remittance of Rs 25.

The right of accepting or rejecting any tender without assigning any reason what-so-ever is reserved.

K. CHENGAPPA,
(District Magistrate.)

ಹರಿಜನರಿಗೆ ದೇವಸ್ಥಾನಗಳ ಪ್ರವೇಶದ ಕುರಿತು ಖಾನೂನಿನ ಮಸೂದೆ.

(2ನೇ ಪುಟದಿಂದ ಮುಂದುವರಿದದ್ದು)

ವಾಗಿ ಸ್ಪಷ್ಟವಾದ ಅಭಿಪ್ರಾಯ ಕೊಟ್ಟಕಾಯಿತು ಸನಾತನಿಗಳು ವಿರೋಧಿಸಿದರೂ ಹಿಂದೂ ಸಮಾಜವು ಅಸ್ಪೃಶ್ಯತೆಗೆ ವಿರೋಧವಿದೆಯೆಂದೂ ಅವರೆ ಅದನ್ನು ಹೋಗಲಾಡಿಸಲು ಕೆಲಸ ಮಾತ್ರ ಮಾಡುವುದಿಲ್ಲವೆಂದೂ ನನಗೆ ತಿಳಿದಿದೆ. ಅಂಥಾ ನಂಬಿಕೆಯಿಂದಲೇ ನಾನು ಉಳಿದಿರುವುದು. ಅನೇಕ ವರ್ಷಗಳಿಂದ ಮಾಡಿದ ಕೆಲಸದಿಂದ ಅಸ್ಪೃಶ್ಯತೆಯು ಹೋಗಬೇಕೆಂತ ಜನರಿಗೆ ಆಗದಿದ್ದರೆ ಈಗ ನಡಿಸುವ ಸ್ವಲ್ಪ ಚಳವಳಿಂದ ಅಂಥಾ ಭಾವನೆ ಹುಟ್ಟಲಾರದು. ಅದಕ್ಕೆ ತಪಶ್ಚರ್ಯದ ಚಳವಳವೇ ಬೇಕಾಗುತ್ತದೆ ಅಸ್ಪೃಶ್ಯರವರ ಪೈಕಿ ಒಬ್ಬನಾಗಿರುವೆನೆಂಬ ಭಾವಿಸಿಕೊಂಡಿರುವ ನನ್ನ ಉಪವಾಸದ್ವಾರಬೆಂಬಲವೂ ಬೇಕಾಗಬಹುದು. ಅದಕ್ಕೂ ತಯಾರಿದ್ದೇನೆ. ಏನೋ ಅಸ್ಪೃಶ್ಯತೆಯು ಹೋಗಬೇಕು. ಇಲ್ಲವೇ ನನ್ನನ್ನು ಕಳಕೊಳ್ಳಲು ತಯಾರಿರಬೇಕು.

ಅಸ್ಪೃಶ್ಯತೆ ನಿವಾರಣೆಯು ಧಾರ್ಮಿಕ ಅವಶ್ಯಕತೆಯಾಗಿದೆ. ದೇವಸ್ಥಾನದಳಿಗೆ ಅವರನ್ನು ಬಿಡುವುದರಿಂದ ಅಸ್ಪೃಶ್ಯತೆ ಭಾವನೆಯು ಹೋಗಿದೆಯೆಂಬದಕ್ಕೆ ಕುರುಹು ಆಗಿದೆ. ಅವರಿಂದ ಹರಿಜನರಿಗೆ ಹೊಸ ಆಧಾರ ದೊರೆತೀತು. ಬರೇ ಆರ್ಥಿಕ ಸಹಾಯದಿಂದ ಏನೂ ಆಗಲಾರದು. ದೇವಸ್ಥಾನಗಳಿಗೆ ಪ್ರವೇಶಕ್ಕೆ ಬಿಟ್ಟರೆ ಆರ್ಥಿಕ ಮುಂತಾದ ಮೇಲ್ಮೆಗಳೆಲ್ಲವೂ ಮುಂಜಾನೆಯೊದನಂತರ ಬೆಳಕು ಬರುವಂತೆ ತಾವಾಗಿಯೇ ಬರುತ್ತವೆ. ಹರಿಜನರನ್ನು ದೇವಸ್ಥಾನಗಳಿಗೆ ಬಿಟ್ಟರೆ ಹಿಂದೂ ಧರ್ಮವು ಶುದ್ಧಿಯಾಗಿ ಹರಿಜನರ ಮತ್ತು ಹಿಂದೂ ಸಮಾಜದ ಮನಸು ಹೊಸ ಬೆಳಕನ್ನು ಪಡೆಯಲು ತಯಾರಿರುತ್ತದೆ.

ದೇವಸ್ಥಾನಗಳ ಪ್ರವೇಶಕ್ಕೆ ಬಿಟ್ಟರಿ ಎಂಬ ಮಾತು ಹರಿಜನರ ಎಲ್ಲಾ ಗುಡಿಸಲಿಗೂ ಹರಡುತ್ತದೆ. ಆರ್ಥಿಕ ಮತ್ತು ಶಿಕ್ಷಣೆಯ ಸಹಾಯವು ಯಾರಿಗೆ ಕೊಟ್ಟರೋ ಅವರಿಗೆ ಮಾತ್ರ ಮುಟ್ಟುತ್ತದೆಯಷ್ಟೆ. ಗುಡಿಗಳೂ ಮಸೀದಿಗಳೂ ಕ್ರೈಸ್ತ ಮತ್ತು ಇಸ್ಲಾಂ ಧರ್ಮದ ಭಾಗಗಳಾಗಿರುವಂತೆ ದೇವಸ್ಥಾನಗಳೂ ಹಿಂದೂ ಧರ್ಮದ ಭಾಗವೆಂತ ನನ್ನಂತೆ ಸಂಬುವವರಿಗೆ ನನ್ನ ವಾದವು ತಿಳಿದೀತು. ಪ್ರತಿಯೊಬ್ಬ ಹರಿ ಜನನೂ ದೇವಸ್ಥಾನಕ್ಕೆ ಪ್ರವೇಶಿಸಬೇಕೆಂತ ಇಲ್ಲ. ಅವರಿಗೆ ಆ ಹಕ್ಕು ಸಿಕ್ಕಿದೆಯೆಂತ ತಿಳಿದರಾಯಿತು. ಹಿಂದೂತ್ವದ ಈ ಭಾವನೆಯಲ್ಲಿ ಉಪವಾಸ ಮುಂತಾದ್ದು ಸ್ವಾಭಾವಿಕವೇ. ದೇವರ ಕೃಪಾದೃಷ್ಟಿಯಲ್ಲಿ ಹೇಗೆ ಜಾಲಂ ಇಲ್ಲವೋ ಹಾಗೆಯೇ ಉಪವಾಸದಲ್ಲೂ ಜಾಲ್ಲಂ ಇಲ್ಲ.

COORG DISTRICT BOARD OFFICE,
Mercara, the 23rd January 1933

NOTICE.

Tenders are invited for the construction of a school building at Hebbale on survey No 161 measuring 4.61 acres. Tenders should reach this office by 1st February 1933. Details* of the work to be done are given below. Timber trees will be supplied within a distance of two or three miles from the site of the building. Felling and sawing charges should be borne by the contractor.

The successful tenderer will have to execute an agreement on stamp paper within a week from the date of acceptance of his tender.

Any further particulars will be supplied in the District Board Office during office hours.

DETAILS

Wall plate	17 cft.
Rafters including railing	60.cft.
Battens 1½" × 1½"	2000 sft
Mangalore tiles 1st class	2100.sft.
Ridge tiles do	70 sft.
Wooden door frames	20.cft.
do. shutters	15.30.sft.
Whitewashing 2 coats with shell lime	4400.sft.

MUD WORK.

Removing surface soil and putting up 2 ft. foundation, Mud wall 1½ ft thickness, 12 ft. height with gables, Plastering the walls both sides etc

The building should be of the following dimensions :—

Length 60 ft. Breadth 15 ft and height 12 ft. will have three doors and eight windows and will have only two rooms with a connecting door.

P. A. CHENGAPPA,
(President Dt Bd.)

ಹಿಂದುಗಳ ಅವನತಿ.

ಕ್ರೈಸ್ತ, ಮುಸಲ್ಮಾನ್ ಮೊದಲಾದ ಧರ್ಮದವರು ತಮ್ಮ ತಮ್ಮ ಧರ್ಮಗಳನ್ನು ಅನೇಕ ಯುಕ್ತಿ ಪ್ರಯುಕ್ತಿಗಳಿಂದ ಬೆಳೆಸುತ್ತಿರುವುದೂ ಹಿಂದೂ ಧರ್ಮವು ಅವುಗಳ ಬಲೆಯಲ್ಲಿ ದಿನೇ ದಿನೇ ಕ್ಷೀಣಿಸುತ್ತಿರುವುದೂ ಸರಿಯಷ್ಟೆ. ಈ ಕಾಲದಲ್ಲಿ ಎಲ್ಲ ಧರ್ಮದವರಿಗಿಂತಲೂ ಹೆಚ್ಚಾದ ಜನ ಸಂಖ್ಯೆಯುಳ್ಳ ಹಿಂದೂ ಧರ್ಮವು ಹೇಗೆ ಕಡಿಮೆಯಾಗುತ್ತಾ ಬಂದಿದೆಯೆಂಬುವುದು ಮತ್ತು ಹೊಸ ಹೊಸ ಧರ್ಮಗಳ ಜನಸಂಖ್ಯೆಯು ಹೇಗೆ ಬೆಳೆಯುತ್ತದೆ ಎಂಬದನ್ನು ಈ ಕೆಳಗಿನ ಸಂಗತಿಗಳಿಂದ ಸರಿಯಾಗಿ ತಿಳಿದುಕೊಳ್ಳಬಹುದಾಗಿದೆ.

ಜಗತಿನಲ್ಲಿಯ ಒಟ್ಟು ಜನಸಂಖ್ಯೆ. ೧೬,೪೬,೪೨,೧೨,೦೦೦

ಕ್ರೈಸ್ತರು	೫೪,೪೫,೧೦,೦೦೦
ಬೌದ್ಧರು	೪೬,೩೮,೭೦,೦೦೦
ಮುಸಲ್ಮಾನರು	೨೨,೧೮,೨೫೦೦೦
ಹಿಂದುಗಳು	೨೧ ೬೭,೩೪,೫೮೬
ಅಡವೀ ಜನಗಳು	೧೫,೮೨ ೭೦,೦೦೦
ಯಹೂದಿಗಳು	೧,೨೨,೦೫,೦೦೦
ಇತರ ಜನಗಳು	೧,೫೨,೮೦,೦೦೦

ಒಂದು ಕಾಲದಲ್ಲಿ ೬೦ ಕೋಟಿ ಜನ ಸಂಖ್ಯೆಯುಳ್ಳ ಹಿಂದೂ ಧರ್ಮವು ತನ್ನ ಮೊದಲನೆಯ ಸ್ಥಾನದಿಂದ ಚ್ಯುತಿ ಹೊಂದಿ ನಾಲ್ಕನೆಯ ಸ್ಥಾನಕ್ಕೆ ಬಂದಿದೆ ಸನಾತನ ವಾದಿಗಳ ಕಷ್ಟಪರಂಪರೆಗಳನ್ನು ಸಹಿಸಲಾರದೆ ಅಸ್ಪೃಶ್ಯರು ಬೇರೆ ಬೇರೆ ಧರ್ಮಗಳಲ್ಲಿ ಸೇರಿಕೊಂಡರೆ ಹಿಂದೂ ಧರ್ಮದ ಸ್ಥಾನವು ಇನ್ನೂ ಕೆಳಗಿಳಿಯುವುದರಲ್ಲಿ ಸಂದೇಹವೇನು? ಮಹಾತ್ಮಾಜಿಯವರು ಅಸ್ಪೃಶ್ಯರನ್ನು ಇನ್ನು ಮೇಲೆ ಪಶುವಿನಂತೆ ಕಾಣದೆ ಅವರಿಗೆ ಇತರರಿಗಿರುವ ಎಲ್ಲ ಸಾಮಾಜಿಕ ಸಮಾನತೆಯನ್ನುಂಟುಮಾಡಿಕೊಡುವುದರಲ್ಲಿಯೇ ಹಿಂದೂ ಧರ್ಮದ ಶ್ರೇಯಸ್ಸಿದೆಯೆಂದು ಸಾರಿ ಸಾರಿ ಹೇಳುತ್ತಿದ್ದಾರೆ. ಕಳೆದ ೪—೫ ಜನ ಪರಿಗಣನೆಯಿಂದ ಹಿಂದುಗಳ ಸಂಖ್ಯೆಯು ಯಾವ ಪ್ರಕಾರ ಕಡಿಮೆಯಾಗುತ್ತಾ ಬಂದಿದೆಯೆಂಬುವುದನ್ನು ಈ ಕೆಳಗಿನ ಅಂಕೆಗಳಿಂದ ತಿಳಿದುಕೊಳ್ಳಬಹುದು.

ಸನ್ ೧೮೪೧ರಲ್ಲಿ ೧೦೦ಕ್ಕೆ ೭೪,೬ ಹಿಂದುಗಳಿದ್ದರು.
" ೧೮೯೧ " ೭೨೪ " "
" ೧೯೦೧ " ೭೧೮ " "
" ೧೯೧೧ " ೬೯೨ " "
" ೧೯೨೧ " ೬೭೬ " "

ಇದರ ಮೇಲಿಂದ ಇನ್ನು ೪೦ ಜನ ಸಂಗಣನೆಯಾಗುವದರೊಳಗಾಗಿ ಹಿಂದೂ ಧರ್ಮವು ಶೂನ್ಯವಾಗುವುದರಲ್ಲಿ ಸಂದೇಹವೇನು? ಸನ್ ೧೯೧೧ರಲ್ಲಿ ೨೧,೭೫,೬೬,೮೯೨ ಹಿಂದುಗಳಿದ್ದರು. ಆದರೆ ೧೯೨೧ರಲ್ಲಿ ೨೧,೬೭,೩೪,೫೮೬ ಜನಗಳಳಿದರು. ಸನ್ ೧೯೧೧ರಲ್ಲಿ ೫೮೬೬೩೩೩ ಕ್ರೈಸ್ತ ಜನಗಳಿದ್ದರು. ಆದರೆ ೧೯೨೧ರಲ್ಲಿ ೪,೭೫೪೦೭ ಜನಗಳಾದರು. ಎಂದರೆ ಹಿಂದೇ ದಶಕವಲ್ಲಿ ೮೫ಲಕ್ಷ ಹಿಂದುಗಳು ಕಡಿಮೆಯಾದರು. ಮತ್ತು ೯ ಲಕ್ಷ ಜನ ಕ್ರೈಸ್ತರು ಹೆಚ್ಚಿದರು. ಇದರ ಮೇಲಿಂದ ಸಾಧಾರಣ ಪ್ರತಿ ದಿನವೆ ೩೪೪ ಜನ ಹಿಂದುಗಳು ಕ್ರೈಸ್ತಯನರಾಗುತ್ತಿದ್ದಾರೆ.

೧೯೨೫ರಲ್ಲಿ ಒಬ್ಬ ಮದ್ರಾಸಿನ ವಾದ್ರಿಸಾಹೇಬರು ಪ್ರಕಟಿಸಿದ ಕ್ರೈಸ್ತಧರ್ಮದ ಪ್ರಸಾರಣೆಯ ಪ್ರಕಟನೆಗಳಿಂದ ಪ್ರತಿದಿವಸ ೪೪೪ ರಿಂದ ೩೦೦ ರ ವರೆಗೆ ಹಿಂದುಗಳನ್ನು ಕ್ರೈಸ್ತಯನ್‌ರಾಗಿ ಮಾಡುತ್ತಿದ್ದಾರೆಂದು ಕಂಡು ಬರುತ್ತದೆ.

ಕೇವಲ ಹಿಂದುಗಳನ್ನೇ ಮತಾಂತರಗೊಳಿಸುವ ೧೩೭ ಮಿಶನರಿ ಸಂಸ್ಥೆಗಳು ಹಿಂದುಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಕೆಲಸಮಾಡುತ್ತಾ ಇವೆ. ಈ ಸಂಘಗಳಿಂದ ೧೪೭೭೭ ಜನ ವಾದ್ರಿಗಳೂ ೫೦೦ ಜನ ಡಾಕ್ಟರರೂ ಪ್ರಚಾರದ ಕಾರ್ಯವನ್ನು ಕೈಕೊಂಡಿದ್ದಾರೆ. ಇವುಗಳ ಏನಾ ೪೦೩ ಅನಾಥಾಲಯಗಳು ಮತ್ತು ೪೩ ಮುದ್ರಣ ಮಂದಿರಗಳು ಇದ್ದು ೯೯ ವರ್ತಮಾನ ಪತ್ರಿಕೆಗಳು ಪ್ರಕಟವಾಗುತ್ತಾ ಇವೆ. ಇದಲ್ಲದೆ ೪೧ ಕಾಲೇಜ್, ೬೧೩ ಶಾಲೆಗಳು ಮತ್ತು ೬೧ ಟ್ರೇನಿಂಗ ಸ್ಕೂಲ್‌ಗಳೂ ಇದ್ದು ಇವುಗಳಲ್ಲಿ ಸಾಧಾರಣ ೪೮೦೪೪ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಿದ್ದಾರೆ.

ಮಿಶನರಿ ಜನಗಳಲ್ಲದೆ, ಮುಸಲ್ಮಾನರಂತೂ ತಮ್ಮ ಸಂಖ್ಯೆಯನ್ನು ಬೆಳೆಸುವದಲ್ಲಿ ವಿಶೇಷ ಪರಿಶ್ರಮ ಪಡುತ್ತಿದ್ದಾರೆ. ಅಂತೆಯೇ ೧೯೧೧ರಿಂದ ೧೯೨೧ರ ಒಳಗಾಗಿ ೨೫ ಲಕ್ಷ ಮುಸಲ್ಮಾನರು ಹೆಚ್ಚಿದರು. ಈಗ ಹಿಂದೂಸ್ಥಾನದಲ್ಲಿರುವ ೭ ಕೋಟಿ ಮುಸಲ್ಮಾನರ ಅರಬಸ್ಥಾನ, ಇರಾಣಗಳಿಂದ ಬಂದಿಲ್ಲ. ಆದರೆ ನಮ್ಮ ಅಲಕ್ಷ್ಯತೆಯಿಂದಲೇ ಅವರೆಲ್ಲರೂ ಹಿಂದು ಧರ್ಮಕ್ಕೆ ವಿಮುಖರಾಗಿದ್ದಾರೆ.

ಕ್ರಿಶ್ಚಿಯನ್ ಜನಗಳಂತೆ ಇವರ ತಮ್ಮ ಸಂಸ್ಥೆಯ ಕೆಲಸವನ್ನು ಪ್ರಕಟಿಸುವದಿಲ್ಲ. ದಿಲ್ಲಿಯ ಒಂದು ಜುಮ್ಮಾ ಮಸೀದಿಯಲ್ಲಿಯೇ ಜಾನೇವರಿ ೧೯೨೭ ರಿಂದ ಆಗಷ್ಟ ೧೯೨೭ ರ ವರೆಗೆ ೭೯೩೬ ಜನರನ್ನು ಮುಸಲ್ಮಾನರನ್ನಾಗಿ ಮಾಡಿದರು. ಎಂದರೆ ಪ್ರತಿ ದಿವಸ ೧೪ ಜನರು ಮುಸಲ್ಮಾನ ಧರ್ಮ ದೀಕ್ಷೆಯನ್ನು ಹೊಂದುತ್ತಿದ್ದರು ನೈಜಾಮ ಸರಕಾರದವರಂತೂ ಮುಸಲ್ಮಾನ ಧರ್ಮ ಪ್ರಸಾರಣೆಗಾಗಿ ಪ್ರತಿವರುಷ ಲಕ್ಷಾಂತರ ರೂ. ಗಳನ್ನು ವೆಚ್ಚಮಾಡುತ್ತಿದ್ದಾರೆ.

ಕ. ಟಾ.

ಕೊಡಗಿನಲ್ಲಿ ಸತ್ಯಾಗ್ರಹ.

ಸ್ವತಂತ್ರ ದಿನಾಚರಣೆ ಬಗ್ಗೆ ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿ ಹರಿಜನರ ಮತ್ತು ಸ್ತ್ರೀಯರುಗಳ ದಸ್ತಗಿರಿಗಳ ಹಬ್ಬ.

ಹರಿದಾಸರಿಗೂ ಮತ್ತು ಇನ್ನು ಮೂವರಿಗೂ ೧ ತಿಂಗಳ ಸೆಕ್ಷನಿನ ಪ್ರಯೋಗ.

ಹರಿಕಥೆಯ ನಡುವೆ ಹರಿದಾಸರ ಮತ್ತು ಇನ್ನೊಬ್ಬರ ದಸ್ತಗಿರಿ! ದಸ್ತಗಿರಿ!!

ವಾರೀಕು 26ನೇ ಗುರುವಾರ ಮಧ್ಯಾಹ್ನ ಮಡಿಕೇರಿಯಲ್ಲಿ ಸುಮಾರು 1 ಗಂಟೆಗೆ ಚೆಂದಿರಮಾಡ ಮುದ್ದಯ್ಯ ಮತ್ತು ಹರಿಜನರ ನಂಜ ಈ ಇಬ್ಬರು ಸ್ವಯಂಸೇವಕರು ಕರಪತ್ರಗಳನ್ನು ಸ್ಕೂಲ್ ರೋಡಿನಲ್ಲಿ ಆಗತಾನೇ ಶಾಲೆಯಿಂದ ಊಟಕ್ಕೆ ಹೋಗುತಿದ್ದ ವಿದ್ಯಾರ್ಥಿಗಳಿಗೆ ಹಂಚುತ್ತಿರಲು ಪೊಲೀಸಿನವರು ಬಂದು ಇಬ್ಬರನ್ನೂ ದಸ್ತಗಿರಿ ಮಾಡಿ ಲಾಕಪ್ಪಿಗೊಯ್ದರು.

ಅದೇ ದಿನ ಸಾಯಂಕಾಲ ಸುಮಾರು 4 ಗಂಟೆಗೆ ಹರಿಜನರ ಬೆಳ್ಳಿ, ತಿಮ್ಮ, ಐಯ್ಯ, ತೋಲ, ಕರುಂಬ, ಬೆಳ್ಳಿ ಮತ್ತು ಪಣಿಯ ಎಂಬವರ ಸಣ್ಣ ಈ ಏಳು ಸತ್ಯಾಗ್ರಹಿಗಳು ರಾಷ್ಟ್ರಧ್ವಜ ಹಿಡಿದು ಸ್ಕೂಲ ಗೇಟಿನಿಂದ ಮೆರವಣಿಗೆ ಹೊರಟಾಗ ಸಬ್ ಇನ್ಸ್‌ಪೆಕ್ಟರ್ ಚೆಂಬಾಂಡ ಕಾರ್ಯಪ್ಪನವರು, ಈ ಏಳು ಜನರನ್ನೂ ದಸ್ತಗಿರಿ ಮಾಡಿ ಸ್ಟೇಷನಿಗೊಯ್ದರು.

ಈ ಮೇಲಿನ ದಸ್ತಗಿರಿಯೂದ ಸ್ವಲ್ಪ ಸಮಯದಲ್ಲಿಯೇ ಮೆ. ಗಳಾದ ಹರಿದಾಸ ಗೋಪಾಲದಾಸರಿಗೂ, ಹೆಚ್. ಆರ್. ಕೃಷ್ಣಯ್ಯನವರಿಗೂ, ಚಿಪ್ಪುಡಿರ ಪೂಣಚ್ಚನವರಿಗೂ ಮತ್ತು ಮನೆಯಪಂಡ ತಿಮ್ಮಯ್ಯನವರಿಗೂ ಉತ್ತರ ಕೊಡಗಿನಲ್ಲಿ ಎಲ್ಲಿಯೂ ತಮ್ಮ ಹರಿಕಥೆಯನ್ನು ನಡಿಸಕೂಡದೆಂಬ ಕಟ್ಟಿನ ನೋಟೀಸು ಜಾರಿಯಾಯಿತು. ಆದರೆ ಇವರಲ್ಲಿ ಮೆ. ಪೂಣಚ್ಚನವರು ತಾನು ಈ ಹರಿಕಥೆಯ ಸಂಘಕ್ಕೆ ಸಂಬಂಧಿಸಿದವನಲ್ಲವೆಂದೂ, ಆದ್ದರಿಂದ ಈ ನೋಟೀಸು ತನಗೆ ಅನುಕರಿಸುವುದಿಲ್ಲವೆಂದು ತಿಳಿಸಿದರು.

ಗೋಪಾಲದಾಸರು ತಮ್ಮ ಹರಿಕಥೆಯನ್ನು ಜಮಾನ್ದಾರರ ಸಂಘದ ಹಾಲ್‌ನಲ್ಲಿ 6 ಗಂಟೆಗೆ ನಡಿಸುವೆಂದು ನೋಟೀಸುಗಳನ್ನು ಹಂಚಿದರು. ಜನರು ಗಂಟೆಗೆ ಸರಿಯಾಗಿ ನೆರೆದರು. ಆದರೆ ಜನಸ್ತೋಮವು ಅಷ್ಟೇನೂ ವಿಶೇಷವಾಗಿರಲಿಲ್ಲ. ಹರಿದಾಸರು ಹರಿಕಥೆಯನ್ನು ಪ್ರಾರಂಭಿಸುವುದಕ್ಕೆ ಮೊದಲು ಶ್ರೀರಾಮ ಸ್ತೋತ್ರ ಮಾಡುವಷ್ಟರಲ್ಲಿಯೇ ಅವರನ್ನೂ ಅವರ ಸಂಗಡ ತಬ್ಬಲಿಯನ್ನು ಬಾರಿಸುತ್ತಿದ್ದ ಹೆಚ್. ಆರ್. ಕೃಷ್ಣಯ್ಯನವರನ್ನೂ ಸಬ್ ಇನ್ಸ್‌ಪೆಕ್ಟರಾದ ಮೆ. ಚೆಂಬಾಂಡ ಕಾರ್ಯಪ್ಪನವರು ದಸ್ತಗಿರಿ ಮಾಡಿ ಅವರನ್ನೂ ಅವರ ಹಸ್ತವಿದ್ದ ತಬಲವನ್ನೂ ಸ್ಟೇಷನಿಗೊಯ್ದರು.

ವೀರಾಜಪೇಟೆಯಲ್ಲೂ ಸಹ ಸ್ವತಂತ್ರ ದಿನಾಚರಣೆಯ ದಿನ ಶ್ರೀಮತಿ ಬಲ್ಯಾಟಂಡ ಮುದ್ದಮ್ಮನವರೂ ಮತ್ತು ಇನ್ನಿಬ್ಬರು ಮಹಿಳೆಯರೂ ಮತ್ತು ಇಬ್ಬರು ಸ್ವಯಂ ಸೇವಕರೂ ದಸ್ತಗಿರಿಯಾಗಿರುವರು. ಪೊಲೀಸಿನವರು ಹುಡುಕುತ್ತಿದ್ದ ಸೈಕ್ಲೋಸ್ಟೈಲ್ (ಕೈ ಅಚ್ಚಿನ) ಮೆಶಿನು, ಯಾರೋ ಬಸ್ಸಿನಲ್ಲಿ ಸಾಗಿಸುತ್ತಿದ್ದಾಗ್ಗೆ ವೀರಾಜಪೇಟೆಯಲ್ಲಿ ಪೊಲೀಸರ ಕೈವಶವಾಯಿತೆಂದು ವರ್ತಮಾನ.

ದಸ್ತಗಿರಿಯೂದ ಹರಿಜನರ ನಂಜ, ಬೆಳ್ಳಿ, ತಿಮ್ಮ, ಐಯ್ಯ, ತೋಲ, ಕರುಂಬ, ಬೆಳ್ಳಿ ಮತ್ತು ಪಣಿಯರವರ ಸಣ್ಣ ಈ ಎಂಟು ಸ್ವಯಂ ಸೇವಕರ ವಿಚಾರಣೆಯು ತಾ. 27ನೇ ಶುಕ್ರವಾರ ನಡೆದು ಎಲ್ಲರಿಗೂ ಮೂವತ್ತೂರು ತಿಂಗಳ ಕಠಿಣ ಸಜೆಯೂ ತಪ್ಪಿದರೆ 1 ತಿಂಗಳ ಸಜೆಯೂ ಮತ್ತು ಹೆಚ್. ಆರ್. ಕೃಷ್ಣಯ್ಯ ಮತ್ತು ಗೋಪಾಲದಾಸರಿಗೆ ಆರಾರು ತಿಂಗಳ ಕಠಿಣ ಸಜೆಯೂ ಐನೂರೈವತ್ತು ರೂ. ಜುಲುಮಾನೆಯೂ ತಪ್ಪಿದರೆ ಒಂದೊಂದು ತಿಂಗಳ ಹೆಚ್ಚಿನ ಸಜೆಯೂ ವಿಧಿಸಲಾಗಿದೆ.

ಒಳದೇಶ.

ಫ್ಲೇಗ್ ಪೇಟೆಯಲ್ಲಿ ಒಬ್ಬ ಪೊಲೀಸಿನವನಿಗೆ ಪ್ಲೇಗು ತಗಲಿರುವದಾಗಿ ಸುದ್ದಿ.

ಸೋಮವಾರಪೇಟೆಯಲ್ಲಿ ಪ್ಲೇಗುರೋಗವು ತಲೆದೋರಿದೆಯೆಂದೂ, ನಾಲ್ಕು ಜನರಿಗೆ ಅಂಟಿದುದರಲ್ಲಿ ಒಬ್ಬನು ಮೃತ್ಯುವಿನ ಬಾಯಿಗೆ ತುತ್ತಾಗಿರುವನೆಂದೂ ವರ್ತಮಾನ.

ವೀರಾಜಪೇಟೆ ಮುನ್ಸಿಪಾಲಿಟಿಯ ಹೊಸ ಕಟ್ಟಡವನ್ನು ತೆರೆಯುವ ಸಮಾರಂಭವು ಕೊಡಗು ಕಮಿಷನರಿಂದ ತಾ. 31—1—33ರಲ್ಲಿ 4.30 ಗಂಟೆಗೆ ನಡಿಸಲ್ಪಡುವುದೆಂದು ತಿಳಿಯುತ್ತೇವೆ.

ವಾರೀಕು 29—1—1933 ನೇ ಆದಿತ್ಯವಾರ ಮಧ್ಯಾಹ್ನ 1 ಗಂಟೆಗೆ ಕಿಗ್ಗಟ್ಟುನಾಡಿನ ಒತ್ತಿದ ಸ್ಪೋರಿನ ಜನರಲ್ ಎಲಿಟಿಂಗು ಕಮಿಶನಂಮ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ತಿಳಿದುಬರುತ್ತದೆ.

ತಾ. 23—1—32 ರಲ್ಲಿ ಕೊಡಗಿನ ಎಲ್ಲಾ ರಾಜಕೀಯ ಸಂಘಗಳ ಪ್ರತಿನಿಧಿಗಳು ಕೊಡಗಿನ ಸರಕಾರಿ ಉದ್ಯೋಗಗಳಲ್ಲಿ ಮೂರ್ನಾಡು ಮಂಡಬೇಕೆಂತ ಸರಕಾರಕ್ಕೆ ತಿಳಿಸಲು ಕಮಿಶನರಲ್ಲಿಗೆ ಹೋಗಿದ್ದರು. ಒಂದೂವರೆ ಘಂಟೆ ಸಂಭಾಷಣೆ ನಡೆಯಿತು.

ಈ ವರ್ಷ ಶಿಶುಗಳ ಪ್ರದರ್ಶನವನ್ನು ಮಡಿಕೇರಿಯಲ್ಲಿ ಮೂರ್ ತಾ. 4 ರಲ್ಲು ನಡಿಸುವದಾಗಿ 25—1—33 ರಲ್ಲು ನಡೆದ ಇಂಡಿಯನ್ ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ವಾರ್ಷಿಕ ಜನರಲ್ ಎಟಿಂಗಿನಲ್ಲಿ ತೀರ್ಮಾನವಾಯಿತೆಂದು ತಿಳಿಯಬರುತ್ತದೆ.

ಫೆಬ್ರವರಿ ತಾ. 1ರಿಂದ ವಿರಾಜಪೇಟೆಯಲ್ಲಿ ಸಬ್ ಇನ್ಸ್‌ಪೆಕ್ಟರಾಗಿದ್ದ ಮೆ. ಮುಂಜಾಂದಿರ ಕಾಳಪ್ಪನವರನ್ನು ಮಡಿಕೇರಿ ತಾಲೋಕಿಗೂ, ಮಡಿಕೇರಿಯಲ್ಲಿ ಸಬ್ ಇನ್ಸ್‌ಪೆಕ್ಟರಾಗಿದ್ದ ಮೆ. ಅಬ್ದುಲ್ ಗಫೂರ್‌ರವರನ್ನು ಪೊಳ್ಳಬಿಟ್ಟಕ್ಕೆ ತನ್ನ ಮೊದಲಿನ ಸ್ಥಾನಕ್ಕೆ ವರ್ಗಾಯಿಸಿರುವರೆಂದು ತಿಳಿಯುತ್ತೇವೆ.

"ಕೊಡವಂಡ ಕಾರ್ಯಪ್ಪ" ಹಾಕಿ ಟೂರ್ನಮೆಂಟಿನ ಮೊದಲನೆಯ ಆಟದಲ್ಲಿ ಸ್ಕೂಲಿನ 'ಎ' ಟೀಮಿನವರು ಬಿ. ಟೀಮಿನವರನ್ನೂ, ಎಟ್ಟಿಟಿಕ್ ಟೀಮಿನವರು ಪೊಲೀಸು ಟೀಮಿನವರನ್ನು ಸೋಲಿಸಿದರು. ತಾ. 27 ರಲ್ಲಿ ಫಾರೆಸ್ಟ್ ಟೀಮಿನವರಿಗೂ ಮತ್ತು ಟೀಚರ್ಸ್ ಟೀಮಿನವರಿಗೂ ಪಂದ್ಯಾಟವು ನಡೆಯುವುದು.

ಇದೇ ತಾರೀಕು 25 ನೇ ಬುಧವಾರ ಬಾಳುಮೂಸಿ ತೋಟದ ಮೇನೆಜರು ಮೆ. ಏಜಟ್ಟಿರ ಕುಟ್ಟಪ್ಪನವರು ಒಂದು ದೊಡ್ಡ ಕಿರುಬ ಹುಲಿಯನ್ನು ಗುಂಡು ಹೊಡೆದು ಕೊಂದರು. ಇದು ಅಲ್ಲಿಯ ಸುತ್ತಮುತ್ತ ಜನರ ದನಗಳನ್ನು ಹಿಡಿಯುತ್ತಿತ್ತು. ಇದರಿಂದ ಜನರಿಗೆ ಬಹಳ ಉಪಕಾರವಾಯಿತು.

ಮಡಿಕೇರಿಯಲ್ಲಿ ನಡೆವ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ದಯಮಾಡಿಸಿದ್ದ ಧಾರವಾಡದ ನರೇಗಲ್ ಪ್ರಹ್ಲಾದ ಕವಿಗಳು ಈ ವಾರ ದಕ್ಷಿಣ ಕೊಡಗಿ ರಾಮಮಂದಿರದಲ್ಲೂ, ಪೊನ್ನಂಪೇಟೆ ಶಾರದಾಶ್ರಮದಲ್ಲೂ, ಶಾಲೆಯಲ್ಲೂ, ಹುದಿಕೇರಿ ರಾಮಮಂದಿರದಲ್ಲೂ ಅವರ ಕವಿತ್ವವನ್ನು ಹಾಡಿ ನೆರೆದ ಮಹಾಜನರನ್ನು ಆನಂದಗೊಳಿಸಿದರೆಂದು ಬಾತ್ಮಿದಾರರೊಬ್ಬರು ಬರೆದಿರುತ್ತಾರೆ.

ಮಡಿಕೇರಿನಾಡು ಬಳಿಗೇರಿ ಗ್ರಾಮದ ಕಣ್ಣಡುಡ ಮಂದಣ್ಣನವರ ಮಗ ಪೊನ್ನಪ್ಪನೆಂಬವನು ರಾತ್ರಿ ತನ್ನ ಮನೆಗೆ ಯಾರೋ ಬಂದು ಕದತಟ್ಟಿದ ಹಾಗೂ ಮತ್ತು ಯಾರೆಂದು ವಿಚಾರಿಸಿದರೂ ಉತ್ತರ ಕೊಡದೆ ಹಾಗೂ, ಕತ್ತಲೆಯೂದುದರಿಂದ ಕಳ್ಳರೆಂದು ಭಾವಿಸಿ ಕಿಟಕಿಯೊಳಗಿನಿಂದ ಗುಂಡು ಹಾರಿಸಿದನೆಂದೂ, ಶಬ್ದವನ್ನು ಕೇಳಿ ಬೇರೆಯವರು ಬಂದು ನೋಡುವಾಗ್ಯೆ ಮನೆಯ ಅಂಗಳದಲ್ಲಿ ಒಬ್ಬ ಮಲೆಯಾಳವನು ಮೃತಪಟ್ಟಿದ್ದನೆಂದೂ ಈ ವಿಷಯ ಪೊಲೀಸು ತನಿಕೆಯಲ್ಲಿದೆಯೆಂದೂ ವರ್ತಮಾನ.

ತಾ. 20—1—1933 ನೇ ಶುಕ್ರವಾರ ಬೆಳಿಗ್ಗೆ 7 ಗಂಟೆಗೆ ನೆಲ್ಯಹುದಿಕೇರಿ ಗ್ರಾಮದ ಕೆರಂಬಳ್ಳಿ ಸೋಮಯ್ಯನೆಂಬವನು ಉಳಿ ಕೂತಲ್ಲಿಗೆ ಅವನಿಗೆ ತಿಳಿಯದೆ ಅವನ ಅಣ್ಣ ಪುಪ್ಪಯ್ಯನೂ ಉಳಿ ಕೂರಲಿಕ್ಕೆಂದು ಕಾಡಿನೊಳಗೆ ನುಗ್ಗಿಕೊಂಡು ಹೋಗುವಾಗ್ಯೆ ಸೋಮಯ್ಯನ ವೈಗವೆಂದು ತಿಳಿದು ಗುಂಡು ಹೊಡೆದದ್ದು ಅಕಸ್ಮಿತವಾಗಿ ಅಣ್ಣನಿಗೆ ತಗಲಿ ಮೃತಪಟ್ಟಿದ್ದನೆಂತಲೂ, ಸೋಮಯ್ಯನು ಒಂದು ನೋಡಲಾಗಿ ಅಣ್ಣನು ತನ್ನ ಗುಂಡಿನಿಂದ ಮೃತಪಟ್ಟಿದ್ದುದನ್ನು ಕಂಡು ತಾನೂ ಒಂದು ಗುಂಡಿನಿಂದ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದೂ, ಪೊಲೀಸು ತನಿಖೆ ನಡೆಯುತ್ತಿದೆಯೆಂದೂ ತಿಳಿಯುತ್ತೇವೆ.

ಹಿಂದೂದೇಶ.

ಮದರಾಸಿನ ತಿಮ್ಮರೆಡ್ಡಿ, ಗಣಪತಿ ರೆಡ್ಡಿ ಮುಂತಾದ ನಾಲ್ಕು ಸ್ವಯಂ ಸೇವಕರು ರತನ್ ಬಜಾರ್ ಪಿಕಟಿಂಗಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಸುಭೋಸ್‌ಚಂದ್ರಬೋಸರನ್ನು ಉತ್ತಮ ತರದ ಚಿಕಿತ್ಸೆಗಾಗಿ ಫ್ರಾನ್ಸ್ ಅಥವಾ ಸ್ವಿಟ್ಜರ್‌ಲೆಂಡಿಗೆ ಕಳುಹಿಸುವರೆಂದು ಸರಕಾರದ ವರ್ತಮಾನವಿದೆ.

ವೈಸರಾಯರು ಡೆಲ್ಲಿಯಲ್ಲಿ ಒಂದು ಎಮೆರ್ಜೆನ್ಸಿ ಸಭೆಯನ್ನು ಸೇರಿಸಿ ಬಲಳ ರಹಸ್ಯವಾಗಿ ರಾಜಕೀಯ ವಿಷಯಗಳನ್ನು ಆಲೋಚಿಸಿದರು.

ಪುಟ್ಟಪರ್ತಿ ದೇವಸ್ಥಾನದ ಪ್ರವೇಶದ ಬಿಲ್ಲನ್ನು ಮುಂಜೂರು ಮಾಡಬಹುದೆಂದು ಇಂಡಿಯಾ ವೈಸರಾಯರ ಆಫೀಸಿಗೆ ಕಳುಹಿಸಿದೆಯೆಂದು ವರ್ತಮಾನವಿದೆ.

ಚಿದಂಬರದ ಉಪನ್ಯಾಸಕಾಶಿಕರ ತಿನ ಕಾಮಸುಂದರ ದೀಕ್ಷಿತರು ಪಂಚಮರಿಗೆ ದೇವಾಲಯ ಪ್ರವೇಶವಿಲ್ಲವೆಂದು ಮನುಸ್ಮೃತಿಯಲ್ಲಿ ಹೇಳಿದೆ ಎಂದು ತಿಳಿಸಿದರು

ಲಕ್ನೋನಗರದ ಅಮೀನಾಬಾದ್ ಎಂಬ ಉದ್ಯಾನವನದಲ್ಲಿ ಪ್ರಾಂತೀಕ ಕಾಂಗ್ರೆಸ್ ಕವಿಟಿಯವರು ಸೇರಿ ಮುಂದಿನ ಕಾರ್ಯಕ್ರಮಗಳನ್ನು ಚರ್ಚಿಸುತ್ತಿರುವಾಗ ಕೆಲ ಮುಂದಿಯನ್ನು ಪೊಲೀಸಿನವರು ದಸ್ತಗಿರಿಮಾಡಿದರು.

ವಿಶಾಖಪಟ್ಟಣದಲ್ಲಿ ಆರ್ಯಸಮಾಜದ ಹಿರಿಯ ಮುಖಂಡನು ಇನ್ನು ಇತರ ಪಂಡಿತರೂ ಸೇರಿ ಅಸ್ಪೃಶ್ಯತ ನಿವಾರಣೆಯು ಹೇಗೆ ಆಗಬೇಕು ಮತ್ತು ಅದಕ್ಕೆ ತಕ್ಕ ನಿವಾರಣೆ ಏನು ಎಂಬುದನ್ನು ವಿವರಿಸುತ್ತ ತಾವೂ ಮತ್ತು ಜನರು ದೀರ್ಘವೆತಸಕ ಭಾಷಣಮಾಡಿದರು.

ಅಹಮದಾಬಾದಿನ ಮಿಲ್ ಮಾಲೀಕ ಸಂಘದ ಸೇಟ್ ಚಮನಲಾಲ್ ಗಿರಿಧರದಾಸ್ ಎಂಬವರು ದೇವಸ್ಥಾನದ ಪ್ರವೇಶದ ಬಿಲ್ಲನ್ನು ಮುಂಜೂರು ಮಾಡುವುದಾದರೆ ಸಿವಿಲ್ ಅಸ್ವಿದ್ಧವು ಇಂಡಿಯಾದಲ್ಲಿ ಪ್ರಾರಂಭವಾಗುತ್ತೆ ಎಂದು ಶಂಕೆ ಕೊಟ್ಟಿದ್ದಾರೆ.

ಚಾಂದಾಪುರ (ಬಂಗಾಳ) ೧೫ ನುಂದಿ ಧಕಾಯಿತರು ಪೊಲೀಸ್ ದುಸ್ಸು ಹಾಕಿಕೊಂಡು ಕತ್ತಿ, ಕಠಾರಿ ಮತ್ತು ತುಪಾಕಿಗಳನ್ನು ಹಿಡಿದುಕೊಂಡು ಬಂದು ನಗದ್ದು ೪೦೦೦ ರೂ. ಗಳನ್ನೂ ೨೫೦೦ ರೂ. ಗಳ ಒಡವೆ ವಸ್ತುಗಳು ಮತ್ತು ಕಾಗದ ಪತ್ರಗಳನ್ನು ಕದ್ದೊಯ್ದಿರು.

ಈ ತಿಂಗಳು 13 ರಲ್ಲಿ ಬೊಂಬಾಯಿನ ಕಸ್ಟಂ ಶಾಖೆಯ ವರು, ಬಾಲರ್ಡ್ ಬಂದರಿನಲ್ಲಿ, ಇಬ್ಬರು ಎಡು ಟಾಂಗಾಗಳಲ್ಲಿ ಸಾದೆಯನ್ನೂ ಮೂಟೆಗಳನ್ನೂ ಹಾಕಿಕೊಂಡು ಹೋಗುತ್ತಿದ್ದರು. ಸಂಶಯದ ಮೇಲೆ ಇಬ್ಬರು ಅಧಿಕಾರಿಗಳು ಅವನ್ನು ಶೋಧಿಸಲಾಗಿ, ಎರಡು ಸಾವಿರ ರೂಪಾಯಿ ಬೆಲೆಬಾಳುವ ಅಫೀಮು ಸಿಕ್ಕಿದುದರಿಂದ ಅವರಿಬ್ಬರನ್ನೂ ದಸ್ತಗಿರಿಮಾಡಿರುವರು.

ಸತಾರಾ ಭಾಗದ ಶ್ರೀ ಸುಪನೆಕರ ಮಹಾರಾಜ ಎಂಬುವರು ಷೋಲಾಪುರದಲ್ಲಿ ಅಧಿಕಾರಿಗಳೇ ಮೊದಲಾದ ಅನೇಕ ಜನರ ಎದುರಿಗೆ ಶ್ರೀ ಸಿದ್ಧೇಶ್ವರ ಕೆರೆಯಲ್ಲಿ ಬೆಳ್ಳಿಲೆ ಇಳಿದು ಕುತ್ತಿಗೆಯ ವರೆಗೆ ನೀರಿನಲ್ಲಿ ನಿಂತರು. ಸ್ವಲ್ಪ ಹೊತ್ತಿನ ಮೇಲೆ ಇವರ ಮೈಮೇಲೆ ದೇವರು ಬಂದಂತಾಯಿತಂತೆ. ಆಗ ಇವರು ಪೇಢಾ, ತುಳಸೀಮಾಲೆ, ಮೊದಲಾದವುಗಳನ್ನು ತೆಗೆದುಕೊಟ್ಟರಂತೆ. ಅವನ್ನೆಲ್ಲಾ ಹಂಚಿದರಂತೆ.

ಬ್ರಿಟಿಷರವರೂ ಮತ್ತು ಫ್ರಾನ್ಸಿನವರೂ ಸೇರಿ ಚೀನಕ್ಕೂ ಮತ್ತು ಜಪಾನಿಗೂ ರಾಜಿ ಮಾಡಿಸುವ ಪ್ರಯತ್ನದಲ್ಲಿದ್ದಾರೆಂದು ವರ್ತಮಾನವಿದೆ.

ಹಿಂದೂ ದೇಶಕ್ಕೆ ಕೇಂದ್ರ ಜನಾಬ್ದಾರಿಯನ್ನು ಕೊಡಬಾರದೆಂದು ಚರ್ಚಿಲ್ ಮತ್ತು ಲೋರ್ಡ್ ಲ್ಯಾಮಿಂಗ್ಟನ್ ಮೊದಲಾದವರು ಚಳವಳಿಗಾರಂಭಿಸಿರುವರು.

ಅಮೇರಿಕಾದಲ್ಲಿ ರಾಕ್‌ಫೆಲ್ಲರ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ರಿಸರ್ಚ್ ಎಂಬ ವೈದ್ಯದ ಶೋಧನಾಲಯದಲ್ಲಿ ಒಂದು ಕೋಳಿಯ ಮೂಸದ ತುಂಡನ್ನು ಒಂದು ಗಾಜಿನ ಕೊಳವಿಯಲ್ಲಿ ಇಟ್ಟಿರುವರು. ಈ ಮೂಸದ ತುಂಡಿನಿಂದ ಪದೇ ಪದೇ ಸಣ್ಣ ಸಣ್ಣ ಜೂರುಗಳನ್ನು ಕೊಯ್ಯುತ್ತಲೇ ಇದ್ದರೂ ಅದು ದಿನ ದಿನಕ್ಕೆ ಬೆಳೆಯುತ್ತಲೇ ಇದೆಯಂತೆ.

ಕೊಡಗು ಮಹಾ ಜನರಲ್ಲಿ ವಿನಂತಿ.

'ಕೊಡಗಿನ ಕಾಣಿಕೆ' ಎಂಬುದಾಗಿ ಒಂದು ಪುಸ್ತಕವನ್ನು ನಾವು ಕರ್ನಾಟಕ ಸಾಹಿತ್ಯ ಸಮ್ಮೇಳನದ ೧೫ನೇ ಅಧಿವೇಶನದ ಸಮಯದಲ್ಲಿ ಹೊರಡಿಸಿದ್ದೇವು. ಆದರೆ ಕೈತಪ್ಪಿನಿಂದ ಕೆಲವು ಲೇಖನಗಳಲ್ಲಿ ಅಸಂಧ್ಯವಾದ ವಿಷಯಗಳು ಒಂದಿದ್ದರಿಂದ ನಾವು ಓದುಗರ ಕ್ಷಮೆ ಬೇಡಿಕೊಳ್ಳುವುದೇನೆಂದರೆ:—

ಕಾಣಿಕೆಯ ವಿದ್ಯಾರ್ಥಿ ಭಾಗವು ತುಂಬಾ ಅಬದ್ಧಗಳಿಂದ ಕೂಡಿರುವ ಕಾರಣ ಅದು ಸಿಂಧುವಾದ ಯಾವೂ ಭಾವಿಸಬಾರದು. ಅದು ಜವಾಬ್ದಾರಿಯ ಭಾಗವಲ್ಲವೆಂದು ತಿಳಿಕೊಳ್ಳಬೇಕು. ಹೀಗೆ ಅಜಾತುರ್ಯದಿಂದ ಮುದ್ರಿತವಾದ ಭಾಗ ಪ್ರಕಟಗೊಂಡ ಬಗ್ಗೆ ನಾವು ಎಲ್ಲವರ ಕ್ಷಮಾಪಣೆಯನ್ನು ಇನ್ನೊಮ್ಮೆ ಕೇಳಿಕೊಂಡು ಕಾಣಿಕೆ ಎಂಡನೇ ಭಾಗವಾದ ವಿದ್ಯಾರ್ಥಿಯ ಲೇಖನಗಳು ಸಿಂಧುವಲ್ಲವೆಂದು ತಿಳಿಕೊಳ್ಳಬೇಕಾಗಿ ಬೇಡುವೆವು. ಅಲ್ಲದೆ ಆ ಭಾಗವನ್ನು ನಮ್ಮಲ್ಲಿರುವ ಪ್ರತಿಗಳಿಂದ ವಿಸರ್ಜಿಸಿದ್ದೇವೆ. ಈ ಮೊದಲೇ ಪ್ರತಿಗಳನ್ನು ಕೊಂಡ ಮಹನೀಯರು ಸಹ ತಮ್ಮಲ್ಲಿರುವ ಆ ಭಾಗಗಳನ್ನು ನಮ್ಮ ನೋಲೆ ಕೃಪೆ ಇಟ್ಟು ಅವುಗಳನ್ನು ಅವರಲ್ಲಿರುವ ಪ್ರತಿಗಳಿಂದ ವಿಸರ್ಜಿಸಬೇಕಾಗಿ ಬೇಡಿಕೊಳ್ಳುವೆವು.

ತಮ್ಮ ವಿಧೇಯರಾದ,
ಆತ್ಮರಾಮಶಾಸ್ತ್ರಿ ಹಿಡ್ಲಮನೆ.
ಸಂಪಾದಕ.

ಮಡಿಕೇರಿ,
12—1—33.

ಕೊಡಗಿನ ಕಾಣಿಕೆ.

ತಾ. 17—1—33ರಲ್ಲು ನಡೆದ ಕರ್ನಾಟಕ ಸಾಹಿತ್ಯ ಪರಿಷತ್ತಿನ ೧೫ನೇ ಅಧಿವೇಶನದ ಸ್ವಾಗತ ಮಂಡಲಿಯ ಸಾಹಿತ್ಯ ಶಾಖೆಯ ಸದಸ್ಯರ ಸಭೆಯಲ್ಲಿ ನಡೆದ ಗೊತ್ತುವಳಿಗಳು:—

1. 'ಕೊಡಗಿನ ಕಾಣಿಕೆ' ಎಂಬ ಪುಸ್ತಕದಲ್ಲಿ ಕೆಲವು ಭಾಗವು ಅಸಂಧ್ಯವಾಗಿ ಭಾವಿಸಬೇಕಾಗಿ ಎಂದು ಮುಂತಾಗಿ ಸಂಪಾದಕರು ಬರಕೊಂಡ ಪತ್ರವು ಓದಲಾಯಿತು.

2. ಸದರಿ ಅಸಂಧ್ಯವಾದ ಮತ್ತು ಚರ್ಚಾಸ್ಪದವಾದ ಭಾಗವನ್ನು ಕುರಿತು ಮೆ. ಅ. ಬೋಪಯ್ಯನವರು ನಡಿಸಿ ಶೋಧದಲ್ಲು ಈ ಲೇಖನ ಜವಾಬ್ದಾರಿಯು ಈ ಸಾಹಿತ್ಯ ಶಾಖೆಯು ಸದಸ್ಯರಿಗಾಗಲೀ, ಸಾಹಿತ್ಯ ಮಂಡಲದ ಸ್ವಾಗತ ಸಮಿತಿಯ ಉಪ ಮಂಡಲದವರಿಗಾಗಲೀ ಸಂಬಂಧವಿಲ್ಲ. ಮತ್ತು ಸದರಿ ಸಂಗತಿಯನ್ನು ಯಾರು ಬರೆದಿರೋ ಅವರೇ ಅವರ ಕಡೆಯವರ ಸಹಾಯದಿಂದ ಬರೆದಿದ್ದಾಗಿದೆ. ಎಂಬದಾಗಿ ಕಂಡು ಬಂದದ್ದನ್ನು ರಿಕಾರ್ಡು ಮಾಡಲಾಗಿದೆ.

ಅಜ್ಜಮಾಡ ಬಿ. ಬೋಪಯ್ಯ,
ಅಧ್ಯಕ್ಷರು.

ಇಂಗ್ಲಿಷ್ ವಿದ್ಯಾಭ್ಯಾಸ.

(1921 ನೇ ಇಸವಿ ಜೂನ್ ತಾ. 1 ರಲ್ಲು ಮಹಾತ್ಮ ಗಾಂಧಿಯವರು ರವೀಂದ್ರನಾಥ ಟಾಗೋರರವರಿಗೆ ಬರೆದ ಪತ್ರದಿಂದ.)

(ಪಿ ಯಂ. ಜಿ. ಬೆಂಗಳೂರು.)

ನಾನು ಇಂಗ್ಲಿಷ್ ವಿದ್ಯಾಭ್ಯಾಸದ ದ್ವೇಷಿಯಲ್ಲವೆಂದೂ, ನಾನು ಹೆಂಗಸರ ಮನಸ್ಸನ್ನು ಸಂಕುಚಿತವೂಡಲು, ಅಶಕ್ತನೆಂದೂ, ಮತ್ತು ನನ್ನ ಜೀವವೂನೆದಲ್ಲೆಲ್ಲಾ ನಾನು ಹೆಂಗಸರಿಗೆ ಅದಷ್ಟು ಹೆಚ್ಚು ಸ್ವಾತಂತ್ರವನ್ನು ಕೊಡಬೇಕೆಂದು ಹೊಡೆದಾಡಿರುವನೆಂದೂ ಕವಿಗೆ ಸಹಜ ರೀತಿಯಲ್ಲಿ ಠಾಗೋರರು ಯೋಚಿಸಿದ್ದರೆ, ತನ್ನ ಅತ್ಯಂತ ಕ್ರೂರನಾದ ಶತ್ರುವಿಗೂ ಮನಃಪೂರ್ವಕವಾಗಿ ಡಾ. ಠಾಗೋರರು ಮೂಡಿದ ಈ ಅನ್ಯಾಯವನ್ನು ನನಗೆ ಮೂಡುವದು ತಪ್ಪುತ್ತಿತ್ತು. ಈಗಿನ ಕಾಲದಲ್ಲಿ ಇಂಗ್ಲಿಷ್ ವ್ಯಾಸಂಗಮೂಡುವದು, ಆದರ, ರಾಜಕೀಯ ಮತ್ತು ವ್ಯಾಪಾರಿಕವಾದ ಬಿಲೆಗಾಗಿಯೇ ಎಂಬುದು ಡಾಕ್ಟರಿಗೆ ಪ್ರಾಮುಕತೆ ಗೊತ್ತಿಲ್ಲ. ಸರ್ಕಾರದಲ್ಲಿ ಕೆಲಸವು, ಇಂಗ್ಲಿಷ್ ಓದದಿದ್ದರೆ ಸಿಕ್ಕುವುದಿಲ್ಲವೆಂದು ನಮ್ಮ ತರುಣರು ಯೋಚಿಸುತ್ತಾರೆ. ಇದು ಸುಳ್ಳಲ್ಲ. ಮದುವೆ ಮೂಡಿಕೊಳ್ಳಲು ಅನುಕೂಲವಾಗುತ್ತವೆಂದೇ ಹುಡುಗಿಯರು ಇಂಗ್ಲಿಷ್ ಓದುತ್ತಾರೆ. ಆಂಗ್ಲೇಯರೊಡನೆ, ಇಂಗ್ಲಿಷಿನಲ್ಲಿಯೇ ಮಾತನಾಡಬೇಕೆಂಬ ಅಪೇಕ್ಷೆಯಿಂದ ಇಂಗ್ಲಿಷನ್ನು ಕಲಿಯಬೇಕೆಂದು ಪ್ರಯತ್ನಪಟ್ಟ ಕೆಲವು ಹೆಂಗಸರ ನಿದರ್ಶನವು ನನಗೆ ಗೊತ್ತಿದೆ. ತಮ್ಮೊಂದಿಗೂ, ತಮ್ಮ ಸ್ನೇಹಿತರೊಂದಿಗೂ ತಮ್ಮ ಹೆಂಡತಿಯರು ಇಂಗ್ಲಿಷಿನಲ್ಲಿ ಮಾತನಾಡುವುದಕ್ಕಾಗದ್ದನ್ನು ನೋಡಿ, ದುಃಖಪಡುವ ಗಂಡಂದಿರುಗಳನ್ನು ನನಗೆ ಗೊತ್ತಿದೆ. ಇಂಗ್ಲಿಷನ್ನು ಮಾತೃಭಾಷೆಯಂತೆ ಮೂಡಲ್ಪಡುತ್ತಿರುವ ಕೆಲವು ಸುಸಂಸಾರಗಳನ್ನು ನನಗೆ ಗೊತ್ತಿದೆ. ನೂರಾರು ಜನರು ಎಂತಹವರೂ, ಇಂಗ್ಲಿಷ್ ವಿದ್ಯಾಭ್ಯಾಸವಿಲ್ಲದೆ ಇಂಡಿಯಾದೇಶಕ್ಕೆ ಸ್ವಾತಂತ್ರ್ಯ ಬರುವುದಿಲ್ಲವೆಂದು ನಂಬಿದ್ದಾರೆ. ನಿಜವಾದ ವಿದ್ಯಾಭ್ಯಾಸವೆಂದರೆ ಇಂಗ್ಲಿಷ್ ವಿದ್ಯಾಭ್ಯಾಸವೆನ್ನುವ ವರೆಗೆ ಈ ಪರಿಸ್ಥಿತಿಯು ಸನೂಜದಲ್ಲಿ ಬೇರೂರಿದೆ ಇವೆಲ್ಲಾ ನನಗೆ ಅವಹೇನತೆಯ ಮತ್ತು ಗುಲಾಮಗಿರಿಯ ಚಿಹ್ನೆಗಳು. ಈಗ ಇರುವೆ ಹಾಗೆ ದೇಶಭಾಷೆಗಳು ಕೀಳಾಗಿರುವದನ್ನು ನೋಡಲು ನನಗೆ ಸಹಿಸಲಸಾಧ್ಯ. ತಂದೆಗಳು ಮಕ್ಕಳಿಗೆ ಅಥವಾ ಗಂಡಂದಿಯರು ತಮ್ಮ ಹೆಂಡತಿಯರಿಗೆ ತಮ್ಮ ದೇಶಭಾಷೆಯನ್ನು ಬಿಟ್ಟು ಇಂಗ್ಲಿಷಿನಲ್ಲಿ ಕಾಗದ ಬರೆಯವದನ್ನು ನಾನು ನೋಡಿ ಸಹಿಸಲಾರೆನು. ನಾನು ಕೂಡ ಡಾ. ಠಾಗೋರರಷ್ಟೇ ಸ್ವಾತಂತ್ರ್ಯ ಪ್ರೇಮಿ ನನ್ನ ಮನೆಯು ಭಾನಿಲುಗಳನ್ನು ಕಿಟಿಕಿಗಳನ್ನು ಮುಚ್ಚಿ ನನ್ನನ್ನು ಜೆಳಗೆ ಬಂದಿಯಾಗಿಡಿಸಿಕೊಳ್ಳುವದಕ್ಕೆ ನಾನು ಇಷ್ಟಪಡುವದಿಲ್ಲ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಸೂಚನೆ:—ಈ ಕೆಳಗಿನ ಲೇಖನಗಳನ್ನು ಪ್ರಕಟಿಸಲಾಗುವುದಿಲ್ಲ. ಬಿದ್ದಂಡ ಕರುಂಬಯ್ಯನವರದು—ವ್ಯಕ್ತಿ ಕುರಿತು ಅಕ್ಷೇಪಣೆಗಳಿರುವುದರಿಂದ, ಬಿ. ಮಂಜಪ್ಪರೈಯವರು—ಬರೇ ಒಂದು ಕುಟುಂಬಕ್ಕೆ ಸಮ್ಮಂಧಪಡುವುದು, ಗೋಣಿಕೊಪ್ಪಲು 'ಹಾಜರಿದ್ದವರದು—ಪ್ರದರ್ಶನದ ಚಾಲಕರಿಗೆ ಬರೆದುಕೊಳ್ಳಬೇಕಾದದ್ದು, 'ಕೊಡಗಿನವ'—ಅಧಿಕಾರಿಗಳಿಗೆ ಮೊದಲೇ ತಿಳಿಸಲಾಗಿದೆಯೆಂತ ತಿಳಿದು ಬಂದಿರುವುದರಿಂದ.

ಕೊಡಗಿನ ಮತಗಳ ವಿಷಯ.

ಕೊಡಗು ದೇಶದಲ್ಲಿ ವೀರಶೈವರುಗಳ ಸ್ವಾಧೀನದಲ್ಲಿ ಅನೇಕ ಮತಗಳಿರುತ್ತೆ. ಇದನ್ನು ಯಾವ ಉದ್ದೇಶಕ್ಕಾಗಿ ಪೂರ್ವದ ರಾಜರುಗಳು ದಯವಾಲಿಸಿರುತ್ತಾರೆಂಬದನ್ನು ಗೊತ್ತಿರುವ ಮಹನೀಯರು ಈ ಪತ್ರಿಕೆಯ ಮೂಲಕ ವಿವರಿಸಿ ಕೊಟ್ಟಿದ್ದರೆ ನಾನು ಬಹಳ ವಂದಿಸುತ್ತಿದ್ದೆನು.

ನನ್ನ ಅನುಭವಕ್ಕೆ ಬಂದ ಮಟ್ಟಿಗೆ ಇದು ಗ್ರಾಮೋದ್ಧಾರಕ್ಕಾಗಿಯೇ ಇಟ್ಟದ್ದೆಂದು ಭಾವಿಸುತ್ತೇನೆ. ಹೀಗಾದ ಪಕ್ಷ ಯಾವದಾದರೊಂದು ಮತ ಇಂಥಾ ಕರ್ತವ್ಯವನ್ನು ಮಾಡಿದೆಯೋ? ಹಾಗೆ ಮಾಡದಿದ್ದರೆ ಇಂಥಾ ಮತಗಳನ್ನು ಇನ್ನೂ ಹೀಗೆ ಇಟ್ಟದ್ದರಿಂದ ಪ್ರಯೋಜನವೇನು?

ಅನೇಕ ಮತಗಳಲ್ಲಿರುವ ಗುರುಗಳು ಯಾವಾಗಲೂ ಕೋರ್ಟು ಕಚೇರಿಗಳಲ್ಲಿ ಕಾಲ ಕಳೆಯುವದನ್ನು ಮತ್ತು ಅಲ್ಲಿ ಕಡೆಯುವ ಕೃತ್ಯಗಳನ್ನು ಅಲೋಚಿಸಿದರೆ ಇಂಥಾ ಮತಗಳನ್ನು ಸರ್ಕಾರದವರು ವಹಿಸಿಕೊಂಡು ಗೇಣಿ ಕೊಟ್ಟಿದ್ದರೆ ಸರ್ಕಾರಕ್ಕಾದರೂ ಕೆಲವು ಮಟ್ಟಿಗೆ ಉಪಕ್ತಿ ಬರುತ್ತಿತ್ತು.

ಇಲ್ಲವೇ ವೀರಶೈವ ಮತದವರು ಅಂಥಾ ಮತಗಳನ್ನು ಸ್ವಾಧೀನಪಡಿಸಿಕೊಂಡು ಗೇಣಿ ಕೊಟ್ಟು ಅಂಥಾ ಉಪಕ್ತಿಯಿಂದ ಮಕ್ಕಳನ್ನು ಎಷ್ಟಾಥ ವಿದ್ಯಕ್ಕಾದರೂ ಕಳುಹಿಸಿದ್ದರೆ ಅದರಿಂದ ಹೆಚ್ಚಿನ ಅಭಿವೃದ್ಧಿಯಾಗುತಿತ್ತು.

ನನ್ನ ಅನುಭವ ಬಂದ ಮಟ್ಟಿಗೆ ಕೊಡಗಿನ ವೀರಶೈವ ಮತದವರು ದಿನೇ ದಿನೇ ಕ್ಷೀಣ ಸ್ಥಿತಿಗೆ ಬರುತ್ತಾ ಇದ್ದಾರೆಂಬದಾಗಿ ಧೈರ್ಯದಿಂದ ಹೇಳಬಲ್ಲೆನು. ಇಂಥಾ ಮತಗಳಿಂದ ಬರುವ ಉಪಕ್ತಿಯನ್ನು ವಿದ್ಯಕ್ಕೆ ಖರ್ಚು ಮಾಡಿದರೆ ಅಲ್ಪ ಸ್ವಲ್ಪ ಜನರಾದರೂ ಮುಂದಕ್ಕೆ ಬಂದಾರು. ಕ್ರಮೇಣ ಇವರ ಮತದವರೇ ಮುಂದಕ್ಕೆ ಬರುವಲ್ಲಿ ಸಂದೇಹವಿಲ್ಲ.

ಆದ್ದರಿಂದ ಈ ಬಾಬಿನಲ್ಲಿ ಸರ್ಕಾರದವರೂ, ಕೌನ್ಸಿಲ್ ಮೆಂಬರುಗಳೂ ಮತ್ತು ವೀರಶೈವ ಮತದವರೂ, ಸಹ ಮುಂದಕ್ಕೆ ಬಂದು ಒಂದು ಒಳ್ಳೆಯ ಏರ್ಪಾಡಿಗೆ ತರಬೇಕಾದದ್ದೇ ಈ ಬಾತ್ಮಿಯ ಉದ್ದೇಶ.

'ಮನಸೊಂದವ'

ಮಡಿಕೇರಿಯಲ್ಲಿ ಮುನ್ಸಿಪಾಲಿಟಿಯಲ್ಲಿ ಮೆಂಬರುತನಕ್ಕೆ ಓಟುಕೊಡುವ ಓಟರರುಗಳೇ ಜ್ಞಾಪಕವಿರಲಿ.

ಓಟರುಗಳೇ,

ಮಡಿಕೇರಿ ಮುನ್ಸಿಪಾಲಿಟಿಯು ಸ್ಥಾಪಿಸಲ್ಪಟ್ಟು ಈಗ್ಯೆ ಮೂವತ್ತು ವರ್ಷಗಳ ಮೇಲಾಗಿದೆ ಎಂಬುದು ಯಾರಿಗೂ ತಿಳಿಯದ ಸಂಗತಿಯಲ್ಲ. ಇದರಲ್ಲಿ ಈ ವರೆಗೆ ಇದಕ್ಕೆ ಸೇರಿದ ಮೆಂಬರುಗಳು ಎಷ್ಟರ ಮಟ್ಟಿನ ಕೆಲಸವನ್ನು ಮಾಡಿದ್ದಾರೆಂಬುದನ್ನು ತಿಳಿದಿರುವಿರಾ? ಹಾಗಾದರೆ ಈಗಿನ ಚುನಾವಣೆಯಲ್ಲಿ ಯಾರನ್ನು ಚುನಾಯಿಸಬೇಕು? ಈಗಿನ ರಸ್ತೆಗಳನ್ನೂ, ಎಲ್ಲೆಲ್ಲಿ ಅಗತ್ಯವಿರುವ ಸ್ಥಳಗಳಲ್ಲಿ ದೀಪವಿಲ್ಲದೆ ಇರುವುದನ್ನು ಮತ್ತು ಪ್ರಾಣಕ್ಕೆ ಮುಖ್ಯವಾದದ್ದರಲ್ಲಿ ಒಂದಾದ ನೀರಿನ ಅಭಾವವನ್ನು ನೋಡಿದರೆ ಜೆನ್ನಾಗಿ ಮನದಟ್ಟಾಗುತ್ತದೆ. ಆದರೆ ಮುನ್ಸಿಪಾಲಿಟಿಯು ಸ್ಥಾಪಿತವಾದ ಎಂಟು, ಹತ್ತು, ವರ್ಷಗಳ ವರೆಗೆ, ಹಣದ ಅಭಾವದಿಂದಲೂ, ಮುನ್ಸಿಪಾಲಿಟಿಯನ್ನು ನಡೆಸಲಿಕ್ಕೆ ಬೇಕಾದ ಅನುಭವದ ಅಭಾವದಿಂದಲೂ, ಸರಿಯಾಗಿ ನಡೆಸಲಿಕ್ಕಾಗದೆ ಇದ್ದಿರಬಹುದು. ಹಾಗೆ ಅಷ್ಟು ವರ್ಷಗಳು ಕಳೆದೂ, ಕೊಡಗಿಗೆ ಮುಖ್ಯ ಪಟ್ಟಣವಾದ ಮಡಿಕೇರಿಯಲ್ಲಿ ಇತರ ಮುಖ್ಯ ಮುನ್ಸಿಪಾಲಿಟಿಗಳಲ್ಲಿ ಹೆಚ್ಚಿನ ತರದಲ್ಲಿ ನಡೆಸಲ್ಪಡುವಂತೆ ಇಲ್ಲಿ ನಡೆಸಲ್ಪಟ್ಟಿಲ್ಲವೆಂದರೆ ಶೋಚನೀಯ ಮಾತು. ಇದನ್ನೆಲ್ಲಾ ಓಟರುಗಳಾದ ನೀವು ಮುನ್ಸಿಪಾಲಿಟಿ ಮೆಂಬರುಗಳ ಚುನಾವಣೆಗಳ ಸಮಯದಲ್ಲಿ ನಿಮ್ಮ ಓಟಿನ ಬೆಲೆಯನ್ನು ತಿಳಿದುಕೊಳ್ಳದೆ, ಯಾರ್ಯಾರಿಗೆ ಕೊಡಬೇಕೆಂಬ ಸ್ವತ್ಯೇಕ ವಿಷಯವನ್ನು ಯೋಚಿಸದೆ ಮತ್ತು ಯಾರ್ಯಾರು ಎಷ್ಟೆಷ್ಟು ಕೆಲಸಗಳನ್ನು ಓಟು ಕೊಡುವ ಮುಂಚೆ ಅವರು ಒಪ್ಪಿದಂತೆ ಮಾಡಿರುವರೆಂಬುದನ್ನು ವಿಚಾರಿಸದೆ, ಅವರ ಅಗಿನ ದರ್ಪದ ಮಾತುಗಳಿಗೂ, ಐಶ್ವರ್ಯಕ್ಕೂ ಹೆದರಿ ಕೊಡುತ್ತಿರುವಿರಾಗಿ ತಿಳಿಯಬಹುದಾಗಿದೆ. ನಿಮಗಿರುವ ಹಕ್ಕು ಎಲ್ಲಾ ಮೆಂಬರುಗಳನ್ನು, ಮೆಂಬರುಗಳನ್ನಾಗಿ ಮಾಡದಂತೆ ಇರುವಂತಾದ್ದು. ಅಷ್ಟೇ ಅಲ್ಲ ಮುನ್ಸಿಪಾಲಿಟಿಯ ಇರುವಿಕೆಯನ್ನೇ ಅಲ್ಲಗೊಳಿಸಬಹುದಂತಾದ್ದು. ಇಂಥಾ ಮಹತ್ವದ್ದು ನಿಮ್ಮ ಅಮೂಲ್ಯವಾದ ಓಟಿನಹಕ್ಕು. ಇದನ್ನು ತಾವು ದಯವಿಟ್ಟು ತಿಳಿದುಕೊಂಡು ವಿಚಾರಮಾಡಿ, ಈಗ ಫೆಬ್ರವರಿ 7 ನೇ ತಾರೀಕಿನಲ್ಲಿ ಬರುವ ಚುನಾವಣೆಯಲ್ಲಿ, ಕೊಡಿ, ಇದರಿಂದ ನೀವೇ ಮುನ್ಸಿಪಾಲಿಟಿಯ ಪ್ರಕಾಶಕ್ಕೆ ಕಾರಣರಾಗುತ್ತೀರಿ. ಅಷ್ಟೇ ಅಲ್ಲ ನಿಮಗೆ ಬೇಕಾದ ಅಗತ್ಯವನ್ನು ಹೊಂದುಕೊಳ್ಳುತ್ತೀರಿ. ದೇಶವು ಎಲ್ಲೆಲ್ಲಾ ಸಾಮಾಜಿಕ ವ್ಯವಹಾರದಲ್ಲಿ ಸ್ವಾತಂತ್ರತೆಯ ವಾತಾವರಣದಲ್ಲಿ ಮುಂದರಿಯುತ್ತಿದೆ ಎಂಬದನ್ನು ತಿಳಿದೂ, ತಿಳಿಯದಂತೆ ನಿಮ್ಮ ಓಟಿನ ಸ್ವಾತಂತ್ರತೆಯನ್ನು ಉಪಯೋಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಮೆಂಬರುತನಕ್ಕೆ ನಿಂತ ಯಾರೇ ಆಗಲಿ ಆತನು ಹೆಚ್ಚು ತಾಪತ್ರಯಗಳು ಇಲ್ಲದೆ, ಸಾಮಾನ್ಯ ಚಿಕ್ಕ ಚಿಕ್ಕ ವಿಷಯಗಳನ್ನು ಗ್ರಹಿಸಿಕೊಂಡು, ಶ್ರದ್ಧೆ ವಹಿಸಿ ತಾನು ನಿಂತ ಕಾರ್ಯದಲ್ಲಿ ಯಶಸ್ವಿಯಾಗುವಂಥವನಾಗಿರಬೇಕು. ಅಷ್ಟೇ ಅಲ್ಲ ಕೇವಲ ಮೆಂಬರುತನದ ಮರ್ಯಾದೆಗೂ, ಅದರಿಂದ ತನಗಾಗಬಹುದಾದ ಪ್ರಯೋಜನಕ್ಕೆ ಇರುವಂಥವನಾಗಿರಬಾರದು. ಮತ್ತು ಓಟರುಗಳ ದೂರುಗಳನ್ನು ಕೇಳಿ ಸರಿಪಡಿಸುವಂಥವನಾಗಿರಬೇಕು. ಹಾಗೆಯೇ ಮುನ್ಸಿಪಾಲಿಟಿಯಲ್ಲಿ ಆಗುವ ಆದಾಯದಿಂದ ಅದರೊಳಗಿನ ಪ್ರಜೆಗಳಿಗೆ ಬೇಕಾದ ಅವಶ್ಯ ಅನುಕೂಲಗಳನ್ನು ಮಾಡಲಾಗದಿದ್ದರೆ, ಇಂಪೀರಿಯಲ್ ಸರಕಾರದಿಂದ ಅವಶ್ಯವಾಗಿ ಹಣ ಸಹಾಯವನ್ನು ಹೊಂದಿ ಮಾಡಿಸಿಕೊಡುವಂತಾ ಮೆಂಬರನಾಗಿರಬೇಕು. ಅಲ್ಲದೆ ಬರೀ ಮುನ್ಸಿಪಲ್ ಸಭೆಗೆ ಕೇವಲ ಲೆಕ್ಕಕ್ಕೆ ಇರುವಂಥವನಾಗಬಾರದು. ಇದನ್ನೇ ಜ್ಞಾಪಕದಲ್ಲಿಟ್ಟಿರಬೇಕಾದ್ದು.

ಈ ವಿಷಯದಲ್ಲಿ ಈಗ ಇರುವ ಪ್ರೆಸಿಡೆಂಟರ ವಿಷಯ ಇಲ್ಲಿ ಹೇಳಿದರೆ ತಪ್ಪಾಗಲಾರದು. ಏನೆಂದರೆ ಇವರು ತನ್ನ ದರ್ಪದ ಮಾತುಗಳಿಂದ ಜನರನ್ನು ಹೆದರಿಸುವಂತೆ ಇದ್ದರೂ ಅಂತಃ ಕರಣದಲ್ಲಿ ದಯಾಳುಗಳು. ಅಷ್ಟೇ ಅಲ್ಲ ಇವರು ಪಕ್ಷಪಾತಿಯಲ್ಲ. ನ್ಯಾಯವಾದಿ. ಇವರ ಇಷ್ಟು ದಿನದ ಕೆಲಸದಲ್ಲಿ ಹೆಚ್ಚಿನ ಪ್ರಯತ್ನದಿಂದ ಮುನ್ಸಿಪಾಲಿಟಿಯ ಗೌರವವನ್ನೂ, ಜನಗಳಿಗೆ ನ್ಯಾಯವನ್ನೂ ಮಾಡಿದ್ದಾರೆಂದರೆ ತಪ್ಪಾಗಲಾರದು. ಇದರಿಂದ ಇವರೇ ಇನ್ನ ಇದ್ದಿದ್ದರೆ ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದರೆಂದು ನಿಶ್ಚೆಸಬಹುದಿತ್ತು. ಆದರೆ ನಮ್ಮೆ ಪುಣ್ಯಕ್ಕೆ ಅವರು ಈ ಕೆರ್ತಿಯ ಚುನಾವಣೆಗೆ ನಿಲ್ಲಲಿಲ್ಲ. ಹೇಗೂ ಇನ್ನು ಮುಂದೆ ಬರುವ ಅಧ್ಯಕ್ಷರೂ ಇದಕ್ಕಿಂತ ಮುತುವರ್ಜಿಯನ್ನು ಇಟ್ಟು ಮುನ್ಸಿಪಾಲಿಟಿಯ ಅಗತ್ಯವನ್ನು ಸೆಲ್ಲಿಸುವರೆಂದು ನಂಬಬಹುದಾಗಿದೆ.

ಓಟರ್.

ಹರಿಜನರ ವಿಷಯ.

ಮಹಸ್ವಾವಿ,

'ಕೊಡಗು' ಪೇಪರು ಸಿಕ್ಕಿದ ಒಂದು ದಿನ ರಾತ್ರಿ ನೈಟ್ ಶಾಲಾ ವಿದ್ಯಾರ್ಥಿಗಳು, ಗ್ರಾಮಸ್ಥರು ಸೇರಿ ಪಾಠವಾಗಿ ಇಟ್ಟುಕೊಂಡಿರುತ್ತೇವೆ. ಈ ಮೂರು ತಿಂಗಳುಗಳಿಂದ ನಮ್ಮ ಕೊಡಗಿನ ದಕ್ಷಿಣ ಭಾಗದ ಮಡಿಕೇರಿ ವೀರಾಜೆಂದ್ರಪೇಟೆ ಪೊನ್ನಂಪೇಟೆ, ಪೊಳ್ಳಬೆಟ್ಟ, ಕೈಕೇರಿ ಬಿಳುಗುಂದ ಇತ್ಯಾದಿ ಕೆಲವು ಪಟ್ಟಣ ನಾಡುಗಳಲ್ಲಿ ಹರಿ ಜನರ ಪಂಗಡವನ್ನು ಮೇಲಕ್ಕೆ ಎತ್ತಲು ನಮ್ಮ ಮಾತೃ ಭೂಮಿಯ ಮಹನೀಯರುಗಳು ಮತ್ತು ಸ್ತ್ರೀಯರುಗಳು ದೊಡ್ಡ ಹೊರೆಯೂಗಿ ಹೊತ್ತು ಹಗಲು ರಾತ್ರಿ ಕಷ್ಟ ನಷ್ಟದಿಂದ ಸೊಂಟ ಕಟ್ಟಿರುವುದನ್ನು ನೋಡಿದರೆ ಹರಿಜನರ ಪಂಗಡವು ಮೇಲು ಮಹನೀಯರ ಪಾದ ಪೂಜೆಯನ್ನು ಮಾಡಬೇಕೆಂದು ನಮ್ಮ ಪಂಗಡದವರನ್ನು ಬೇಡುತ್ತೇನೆ

ಕೊಡಗಿನ ಉತ್ತರ ಭಾಗದಲ್ಲು ಹರಿಜನ ಗುಂಪುಗಳೇ ಹೆಚ್ಚು. ನಮ್ಮ ಕೊಡಗು ಘನ ಸರ್ಕಾರದವರು ಹರಿಜನರು ಹೆಚ್ಚಿಗೆ ಇರುವ ಭಾಗಗಳೆಲ್ಲಾ ಶಾಲೆಗಳು ನೈಟ್ ಶಾಲೆ ಸಹ ದಯೆವಾಲಿಸಿದ್ದಾರೆ. ಹರಿಜನ ಸಂಖ್ಯೆ ಹೆಚ್ಚಿಗೆ ಇರುವ ಕೊಡಗಿನ ಉತ್ತರ ಭಾಗದಲ್ಲು ಇಂಥ ಸುಸಮಯದಲ್ಲಿ ಜ್ಞಾನಹೀನರಾಗಿ ಕೆಲವು ಹೇಯವಾದ ವ್ಯಗಗಳಿಗೂ ಕಡಿಮೆ ಆಗಿರುವ ಹರಿಜನ ಪಂಗಡದ ಕಡೆ ಈ ಭಾಗದ ಮೇಲು ಮಹನೀಯರು ದೃಷ್ಟಿ ಇಡದೆ ಇರುವದನ್ನು ನೋಡಿದರೆ ಈ ಕಡೆ ಹರಿಜನರ ದುರಾದೃಷ್ಟವೆಂದೇ ಹೇಳಬೇಕು. ಈಗಲಾದರೂ ನಮ್ಮ ಪಂಗಡದ ಕಡೆ ದೃಷ್ಟಿ ಇಡಬೇಕೆಂದು ಹರಿ ಕುಲದ ಪಂಗಡದವರೆಲ್ಲರೂ ಬೇಡಿಕೊಳ್ಳುತ್ತೇವೆ.

ಇದೇ ಜನವರಿ ತಾರೀಕು 15ನೇ ಭಾನುವಾರ ಹೆಬ್ಬಾಲೆ ಬಂಗ್ಲೆ ವೈದನದಲ್ಲು ಫ್ರೇಜರ್‌ಪೇಟೆ ಹೋಬಳಿ ಹೆಬ್ಬಾಲೆ ಹುಲುಸೆ, ಮೂಡ್ಯೂರು, ಕೂಡಿಗೆ ಮೈಸೂರು ಸೀಮೆ ಕುಂಬಾರಳಿ, ಕಾಡನೂರು ಇತ್ಯಾದಿ ಗ್ರಾಮದ ಹರಿಜನರು ಹಾಜರಿದ್ದರು. ತೊರೆನೂರು, ಶಿರಂಗಾಲ, ನಿಲ್ಲೂರು ಗ್ರಾಮದವರು ಕಾರಣಾಂತರದಿಂದ ಬರಲಿಲ್ಲ.

ಬಳಿಕ ಹೆಬ್ಬಾಲೆ ಹರಿಜನ ಬೇಲೂರ ಎಂಬವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು ಸದರಿ ಪಂಡಮ ಶಾಲಾ ವೊಸ್ಟರು ನಮ್ಮ ಪಂಗಡಕ್ಕೆ ದೇಶದ ಮಹನೀಯರು ಮಾಡಿರುವ ಇನ್ನೂ ಮಾಡುತ್ತಿರುವ ಅನೇಕ ಧೃಷ್ಟಾಂತವನ್ನು ವಿವರಿಸಿ ಮಹನೀಯರು ತೋರಿಸಿ ಕೊಡುವ ಹಾದಿಯಲ್ಲು ನಾವು ಇಂಥಾ ಸಮಯದಲ್ಲು ಮುಂದೆ ಬಂದು ನಮ್ಮ ನಮ್ಮ ಜ್ಞಾನ ಹೆಚ್ಚಿಸಿಕೊಳ್ಳುವದಲ್ಲದೆ ಸತ್ಕ ಗೋವೊಂಸ ತ್ಯಜಿಸಿ ವಾರಕ್ಕೆ ಒಂದೆರಡು ಸಾರಿ ಸ್ನಾನ ಮಾಡಿಕೊಂಡು ಇದ್ದ ಹರಕು ಬಟ್ಟೆ ಮುರುಕು ಗುಡಿಸಲುಗಳನ್ನು ಶುಚಿಗೊಳಿಸಿಕೊಂಡು ನಮ್ಮ ಮಕ್ಕಳನ್ನು ಕಡ್ಡಾಯವಾಗಿ ಸೈನುರಿ ಆಗುವ ವರೆಗೆ ಶಾಲೆಗೆ ಕಳುಹಿಸಿ ನಮಗಾಗಿ ಹೋರಾಡುವ ಮಹನೀಯರು ತೋರಿಸಿರುವ ಹಾದಿ ಹಿಡಿದು ಹೋಗಬೇಕು. ಇತ್ಯಾದಿ ಕೆಲವು ಸಂಗತಿ ತಾವು ತಯಾರು ಮಾಡಿದ ಲೇಖನದಿಂದ ಓದಿ ಹೇಳಿದರು.

ಅನಂತರ ಸದರಿ ಉಪಾಧ್ಯಾಯರೇ ಕಳೆದ ಅಕ್ಟೋಬರ್ ತಾರೀಕು 2ರಲ್ಲು ಮಡಿಕೇರಿಯಲ್ಲಿ ನಡೆದ ಎಂಟರಗಿನಲ್ಲು ಅಸ್ಪೃಶ್ಯತೆಯ ಕುರಿತು ದೇಶದ ದೊಡ್ಡ ಮಹನೀಯರು ಮಾಡಿದ ಭಾಷಣವನ್ನೂ ಇದು ವರೆವಿಗೂ ನಡೆದು ಬಂದ ಪ್ರತಿ ವಾರದ ಪೇಪರಿನಲ್ಲು ದಕ್ಷಿಣ ಕೊಡಗಿನಲ್ಲಿ ಮಹನೀಯರು ಹರಿ ಕುಲ ಪಂಗಡಕ್ಕೆ ಕೊಡುವ ಉತ್ತೇಜನವನ್ನೂ ಪ್ರತಿ ವಾರದ ಪೇಪರಿನಿಂದ ಮುಖ್ಯ ಮುಖ್ಯ ಸಂಗತಿ ಓದಿ ಹೇಳಿದರು. ಇವರು ಓದಿದ ಭಾಗವು ನಮ್ಮ ಹರಿಕುಲ ಪಂಗಡದವರಿಗೆ ಮಾಡುತ್ತಿರುವಉತ್ತೇಜನವನ್ನು ಕೇಳಲು ಬಹಳ ಕುತೂಹಲದಿಂದ ಕೂಡಿದ್ದರು. ಮತ್ತು ಪೇಪರಿನಲ್ಲು ಇದ್ದ ಕೆಲವು ಹಾಡುಗಳನ್ನು ಇಂಪಾಗಿ ಹಾಡಿ ಜನರಿಗೆ ಸಂತೋಷವನ್ನು ಹೆಚ್ಚಿಸಿದರು.

ಹೆಬ್ಬಾಲೆ ಪೂಜಾರಿ ಸಂಘದ ಸೆಕ್ರೆಟರಿ ಚಿನ್ನಪ್ಪನವರು ಪೇಪರಿನಲ್ಲು ಕೆಲವು ಸಂಗತಿ ಓದಿದ್ದಲ್ಲದೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕೆಲವು ಕಥೆಯನ್ನು ಹೇಳಿ ನೆರೆದ ಜನರಿಗೆ ಸಂತೋಷ ಉಂಟು ಮಾಡಿದರು.

ಹೆಬ್ಬಾಲೆ ಪುರಿಯನವರು ಇಲ್ಲಿ ನೆರೆದಿರುವ ಗ್ರಾಮದವರು ಸತ್ಕ ಗೋವೊಂಸ ತಿನ್ನಬಾರದು. ಸತ್ಕದನ್ನು ಸಾಗಿಸಿ ಸ್ನಾನ ಮಾಡಿ ಶುಚಿಯಾಗಿ ಇರಬೇಕು ಎಂದು ಸರ್ವರನ್ನು ಬೇಡಿಕೊಂಡರು.

ಈ ಸಭೆಯಲ್ಲು ನೆರೆದ 81 ಹರಿಜನರುಗಳಲ್ಲಿ ಕೆಲವು ಗ್ರಾಮದವರು ಈ ಮೊದಲೇ ನಾವು ತಿನ್ನುವುದನ್ನು ಬಾಕಿ ಮಾಡಿರುತ್ತೇವೆ ಎಂದು ಹೇಳಿದ್ದಕ್ಕೆ ಅಧ್ಯಕ್ಷರು ಸಭೆಯ ಪರವಾಗಿ ಅವರಿಗೆ ವಂದನೆ ಮಾಡಿದರು. ಇನ್ನು ಮುಂದೆ ಸತ್ಕ ಗೋವುಗಳ ಮಾಂಸವನ್ನು ಬಿಡಬೇಕೆಂದೂ ನನ್ನ ನಮ್ಮ ಗಾ

ಮದ ಉತ್ಸವು ಮಹನೀಯರು ಆದಿಯಿಂದ ನಮ್ಮ ಪಾಲಿಗೆ ಇಟ್ಟ ಎಲ್ಲಾ ಕೆಲಸ ಕಾರ್ಯಗಳಾಗಲೀ, ಸತ್ಕ ದನ ಸಾಗಿಸುವ ದಾಗಲೀ ಸ್ವಲ್ಪವೂ ಬಾಕಿ ಮಾಡದೆ ಮೊದಲಿಗಿಂತ ಹೆಚ್ಚಿಗೆ ಅವರು ಹೇಳುವ ಮುಂಚೆ ಎಲ್ಲಾ ಕೆಲಸ ಕಾರ್ಯವನ್ನು ಮಾಡಿ ಅವರ ಪಾದಸೇವಕರಾಗಿ ಅವರಿಂದಲೇ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡು ಅವರಿಂದ ಆಶೀರ್ವಾದ ಪಡೆಯಬೇಕೆಂದು ಒತ್ತಿ ಹೇಳಿದನು.

ನೆರೆದ ಹರಿಜನರು ಇನ್ನು ಮುಂದೆ ನಾವುಗಳು ಸತ್ತ ಗೋವೂಂಸವನ್ನು ತಿನ್ನುವದಿಲ್ಲ. ಈ ರೀತಿ ನಮ್ಮ ಗ್ರಾಮ ದಲ್ಲು ನಮ್ಮ ಪಂಗಡದವರಿಗೆ ಒಪ್ಪಿಗೆ ಮಾಡಿ ನಮ್ಮ ನಮ್ಮ ಗ್ರಾಮದ ಮೇಲು ಮಹನೀಯರ ಪ್ರೀತಿಗೆ ಪಾತ್ರರಾಗಿ ನಡೆದುಕೊಳ್ಳುತ್ತೇವೆಯೆಂದು ಒಪ್ಪಿದರು. ಪುಣ್ಯಪಾನವು ಅಲ್ಲಿ ನೆರೆದ ಹರಿಜನರಲ್ಲಿ ಮೊದಲಿಗಿಂತಲೂ ಬಹಳ ಕಮ್ಮಿ ಎಂದು ತಿಳಿದು ಬಂತು ಹಾಗಿದ್ದಪಕ್ಷ ಇನ್ನಿ ಕಮ್ಮಿ ಮಾಡಬೇಕೆಂದು ಬೇಡಿಕೊಂಡು ಅಧ್ಯಕ್ಷರಿಗೆ ವಂದನೆಯಿಂದಲೂ ಮಂಗಳ ಹಾಡಿನಿಂದಲೂ 5½ ಗಂಟೆಗೆ ಸಭೆಯು ಮುಕ್ತಾಯವಾಗಿ ನೆರೆದ ಹರಿಜನ ಮಹನೀಯರು ತೆರಳಿದರು. ಇನ್ನು ಮೂರು ತಿಂಗಳಿಗೆ ಒಂದಾವರ್ತಿ ಈ ಹೋಬಳಿಯ ಹರಿಜನರು ಈ ದಿನದಂತೆ ಪಟ ಸೇರಬೇಕೆಂದು ತೀರ್ಮಾನ ಮಾಡಿಕೊಂಡರು.

ಹರಿಜನ ದ್ಯಾವ,
ಹುಲುಸೆ ಸೈಟ್ ಶಾಲಾ ವಿದ್ಯಾರ್ಥಿ.

Wanted.

Assets 17500000 Exeeeds.	Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO., LTD., Calcutta. (Est. 1906.)

Please apply to—

CHIEF ORGANISER,
National Insurance Co., Ltd.,
Arcot Srinivas Char St.,
12—5 Bangalore City.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೯೧೩

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—23) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ಸ್‌ಟೇಬಲ ಇನ್ಷ್ಯೂರೆನ ಕಂಪೆನಿ ಲಿಮಿಟೆಡ.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96 6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ಸ್‌ಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲ,'
(12—8) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ್ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52—16

ಯು. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವಸಿದ್ಧ ಔಷಧಗಳು.

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಬಳಜ್ವರ, ಮಲಬದ್ಧತೆ, ಕೈಕಾಲು ಒಜ್ಜುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ 7—0—0.

೨. **ಅಶೋಕಾರಿಷ್ಟ ಮತ್ತು ಮೂತ್ರೆ**—ಹೆಂಗಸರ ಮಂಟ್ಪದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಾಗ್ರಹ ಗುಟಿಕೆ**—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0.

(52—17)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್ ಕೂ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,950— 0—0
ಜಮೂಬಂದ ಠೇವಣಾತಿ	—	22,8525—10—8
ವಸೂಲಾದ ಕ್ಷೇಮನಿಧಿ	—	48,840— 3—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಸ್ಥೆಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕಾಗ್ತದೆ.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟಮಾಡ ದೇವೈಯ್ಯನವರು,
ರಾವ್ ಬಹದ್ದೂರ್.

ಟ್ರೈಜರರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಮನೆಯಪಂಡ ಯಂ. ಬೆಳ್ಯಪ್ಪನವರು.

ಕಾರೀಕು 1—1—1933.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ನಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಹೆಚ್. ಚೌರಿರ ಮೂದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿಡ್ದಾಪುರ—ಮೆ. ಐನಂಡ ಮೂಡಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಮ್ಮೆಯ್ಯನವರು,

ಮಕ್ಕು ಅರಮಣಮಾಡ ಪಿ ಕಾರ್ಯಪ್ಪನವರು,

ಹುದಿಕೇರಿ ಹೆ ತಿತಿಮತ್ತಿ—ಮೆ. ಜೆ. ಮೂದಮ್ಮೆಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚೈಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮರಿಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಚಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಎಂದೂ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಬತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬುದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ವೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ಥಾಂಜಿ	ವಿಶಾಖಪಟ್ಣ [52—47

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ
ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚು
ವವು ಮತ್ತು ಇದು ಮಧುರವಾಗಿ
ರುವುದರಿಂದ ಮಕ್ಕಳು ಪ್ರೀತಿ
ಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.
52—2

ಕಾರ್ಡು ಬರೆದರೆ ತಾಗಿನ ಕ್ಯಾಟಲಾಗು ಮೂಫಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಗಳು, ಕೇಪುಗಳು, ಮತ್ತು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
210 Abdul Rehiman Street, BOMBAY.
26—20

Printed & published by M. M. Ganapathi at "Kodagu" Press, Mercara for "Kodagu" Ltd.